Sri B. R. SUNTHANKAR.—Is the Government aware that there is suspicion in the minds of the Marathi people that they will not get justice at the hands of the Police ?

Sri K. HANUMANTHAIYA.—Every time Sri Sunthankar puts a question, he puts it by way of insinuation or bringing about bad feelings between sections and sections. I appeal to him that these questions are not relevant and under the rules such questions cannot be put.

Mr. SPEAKER.—I have disallowed that question.

Sri K. HANUMANTHAIYA.—This is not the first time that attempt is made to bring about what is called division and disruption between Marathi people and Kannada people. That is not a happy course to follow.

Mr. SPEAKER.—Question time is over.

QUESTIONS FOR ANSWERS ON THE DAY.

(but not taken up)

Extension of Shops and Establishments Act to all Towns and Cities in the States.

Q.—456. Sri K. T. DASAPPA (Hassan).—

Will the Government be pleased to state :—

(*a*) the basis in extending the Shops and Establishments Act to different towns and cities in this State;

(*b*) whether it has come to their notice that big towns where there is agitation for the Act being extended are omitted, while extending the same to smaller towns;

(*c*) whether they would revise the list and include all towns which should come under the said Act ?

A.—Sri B. VAIKUNTA BALIGA (Minister for Labour and Legal Affairs).—

(*a*) The provisions of the Shops and Establishments Act are extended to different towns keeping in view the commercial importance of the place, the number of Shops and Establishments and the workers likely to be benefited thereby.

(*b*) No.

(*c*) Yes.

MYSORE MOTOR VEHICLES TAXATION BILL, 1957.

Motion to extend time for presentation of Select Committee Report.

Sri B. VAIKUNTA BALIGA (Minister for Labour and Legal Affairs).—I move :

> "That the time fixed for the presentation of the report of the Select Committee to consider the Mysore Motor Vehicles Taxation Bill, 1957 be extended and report presented by the end of the current session of the Assembly."

I wish to report that to the extent the work has been done, we have substantially covered the main provision. There are one or two points still left over. The deliberations are not over as yet in the midst of other work that has been engaging the attention of other Members. I have therefore moved for the extension of the time which is going to expire and I request the House to sanction the extension of time as suggested in my motion.

Mr. SPEAKER.—The question is:

> "That the time fixed for the presentation of the report of the Select Committee to consider the Mysore Motor Vehicles Taxation Bill, 1957 be extended and report presented by the end of the current session of the Assembly."

The motion was adopted.

MYSORE IRRIGATION (LEVY OF BETTERMENT CONTRIBUTION AND WATER RATE) BILL, 1957.

Motion to consider (continued)

Sri H. M. CHANNABASAPPA (Krishnarajanagar).—Sir, I wish to submit that, so far as time limit is concerned, generally each member may

be given 15 minutes and, if need be, it is left to the discretion of the Chair to extend it to such an extent as the Chair deems fit.

Mr. SPEAKER.—I have no objection to give 15 minutes to each member. I am taking action under rule 168 which says that all matters not specifically provided in these rules shall be regulated in such manner as the Speaker may from time to time direct.

ಶ್ರೀ ವಿ. ಎಲ್. ಪಾಟೀಲ (ರಾಯಬಾಗ).—ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಬಿಲ್ಲಿನ ಮುಖ್ಯ ಉದ್ದೇಶವೇನೆಂದರೆ ಸರಕಾರದ ಟ್ರೆಜರಿಗೆ ಹೆಚ್ಚು ಹಣ ಬರುವಂತೆ ಮಾಡಿ ಅದು ತುಂಬಬೇಕೆಂಬುದೇ ಆಗಿದೆ. ರಾಜ್ಯದಲ್ಲಿಯ ಸರಕಾರದ ಟ್ರೆಜರಿ ತುಂಬಬೇಕಾದುದು ನ್ಯಾಯವಾದರೂ ಅವಶ್ಯವಾದರೂ ಸರಕಾರಕ್ಕೆ ಬರುವ ಹಣ ಯಾವ ಪದ್ಧತಿಯಿಂದ ಬರಬೇಕು ಎಂಬ ಬಗ್ಗೆ ಮತಭೇದವಿದೆ. ಈ ಸರಕಾರವನ್ನು ನೋಡಿದರೆ ಶ್ರೀಮಂತರ ಮೇಲೆ ತೆರಿಗೆಯಿಲ್ಲ, ಆದರೆ ಬಡವರ ಮೇಲೆ ಎದ್ದರೆ ಬಿದ್ದರೆ ಟ್ಯಾಕ್ಸ್ ಹಾಕುವುದು ಕಂಡುಬರುತ್ತದೆ. ಸ್ವಲ್ಪ ಜಮೀನು ಇದ್ದವರಿಗೆ exemption ಕೊಡುವ ಬಗ್ಗೆ ನಾನು ಸೂಚಿಸುವುದು ಏನೆಂದರೆ 20 ಅಥವಾ 25 ಎಕರೆ ಜಮೀನು ಇದ್ದವರನ್ನು ಬಿಟ್ಟುಬಿಡಬೇಕು. ಲೆವಿ ಕೊಡಿಸಬಾರದು; 25 ಎಕರೆಯಿಂದ 50 ಎಕರೆ ಜಮೀನು ಇದ್ದವರಿಗೆ ಅರ್ಧದಷ್ಟು contribution ತೆಗೆದುಕೊಳ್ಳುವುದಕ್ಕೆ ಅಡ್ಡಿಯಿಲ್ಲವೆಂದು ನಾನು ಸೂಚಿಸುತ್ತೇನೆ. ಒಬ್ಬ ಸದಸ್ಯರು ಮಾತನಾಡುವಾಗ ಹೇಳಿದ್ದೇನೆಂದರೆ ಟ್ರೆಜರಿಯಿಂದ ಸರಕಾರದ ಹಣ ಯಾವುದೇ ಯೋಜನೆಗೆ ಖರ್ಚು ಮಾಡಿದಲ್ಲಿ ಅದರ ಉಪಯೋಗವನ್ನು ಯಾರು ಮಾಡಿಕೊಳ್ಳುತ್ತಾರೋ ಅವರು ತಮಗಾಗುವ ಲಾಭದ ಸಲುವಾಗಿ ಸರಕಾರಕ್ಕೆ ತಿರುಗಿ ಹಣ ಕೊಡಬೇಕು ಎಂಬ ವಿಚಾರವನ್ನು ವ್ಯಕ್ತಪಡಿಸಿದರು. ಮುಂಬಯಿ ಕರ್ನಾಟಕದ ಪ್ರದೇಶದಲ್ಲಿ ಘಟಪ್ರಭಾ ಕೆನಾಲ್ ಕೆಲಸವನ್ನು scarcity works ಎಂದು ಪ್ರಾರಂಭ ಮಾಡಿದ್ದಾರೆ. ಈ ರೀತಿ ಹಣ ಖರ್ಚು ಮಾಡುವುದು ಸರಕಾರದ ಕರ್ತವ್ಯವಾಗಿದೆ. ಇಂತಹ ಕಾಮಗಾರಿಗಳಲ್ಲಿ ಮಾಡಿದ ಹಣದ ಖರ್ಚಿನ ಸಲುವಾಗಿ ತಿರುಗಿ ಜನರಿಂದ ಹಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು. ಜನತೆಯ ಹಿತದ ಸಲುವಾಗಿ ಬರಗಾಲ ಪ್ರದೇಶದಲ್ಲಿ ಹಣವನ್ನು ಸರಕಾರ ಖರ್ಚು ಮಾಡಬೇಕಾಗುತ್ತದೆ. ಇಂಥ ಖರ್ಚು ಮಾಡಿದ ಹಣವನ್ನು ಯಾವ ಸರಕಾರವೂ ತಿರುಗಿ ವಸೂಲುಮಾಡಲು ಪ್ರಯತ್ನ ಪಟ್ಟಿಲ್ಲ ಮತ್ತು ವಸೂಲು ಮಾಡುವುದರ ಸಲುವಾಗಿ ಯಾವ ಕಾನೂನದಲ್ಲಿಯೂ ಇಲ್ಲ. ಈಗ ಪರ್ಕೋಲೇಷನ್ ಟ್ಯಾಕ್ಸ್ ಹಾಕಲಾಗಿದೆ. ಕೆನಾಲ್ ಬರುವ ಮೊದಲು ಅಲ್ಲಿ ಭಾವಿಗಳು ಇದ್ದವು. ಅಲ್ಲಿರುವ ಭಾವಿಯ ನೀರಿನಿಂದ ಸಾಗುವಳಿ ಮಾಡುತ್ತಿದ್ದರು. ಆದಕಾರಣ ಈ ಪರ್ಕೋಲೇಷನ್ ಟ್ಯಾಕ್ಸ್ ಆ ಪ್ರದೇಶದಲ್ಲಿ ಹಾಕುವದಕ್ಕೆ ಸರಕಾರ ಪ್ರಯತ್ನಮಾಡಬಾರದೆಂದು ನಾನು ಸೂಚನೆ ಮಾಡುತ್ತೇನೆ.

ಭೂ ಸಾಗುವಳಿಯ ಸಂಬಂಧದಲ್ಲಿ ಮುಂಬಯಿ ಕರ್ನಾಟಕದ ಪ್ರದೇಶದ ಬಹಳ ಮಹತ್ವದ ಕಾನೂನಾಗಿರುವ ಟೆನನ್ಸಿ ಆಕ್ಟು ಜಾರಿಯಲ್ಲಿ ಬಂದು "Tillers' day" ಆಚರಿಸುವದನ್ನು ಮುಂದಕ್ಕೆ ಹಾಕಲಾಗಿದೆ. ರೈತನೇ ಭೂಮಿಯ ಒಡೆಯನಾಗುವುದರಿಂದ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳಬೇಕೆಂದು ಇರುವ ಈ ಬಿಲ್ಲನ್ನು ಟಿಲರ್ಸ್ ಡೆ ಪೂರ್ತಿಗೊಳ್ಳುವವರೆಗೆ ತರುವದು ಅವಶ್ಯವಿಲ್ಲವೆಂದು ನಾನು ಸೂಚಿಸುತ್ತೇನೆ. ಸರಕಾರೀ ನೌಕರರು ಈ ಕಾನೂನನ್ನು ಅಮಲಿನಲ್ಲಿ ತರುವುದರಲ್ಲಿ ಸರಕಾರದ ಇಚ್ಛೆಯಂತೆ ನಡೆಯಲಿಕ್ಕೆ ಪ್ರಯತ್ನ ಮಾಡುತ್ತಾರೆ. ಹಿಂದಕ್ಕೆ ಬ್ರಿಟಿಷ್ ರಾಜ್ಯಡಾಡಳಿತದಲ್ಲಿ ಆಗಿನ ಸರಕಾರದ ಇಚ್ಛೆಯಂತೆ ನಮ್ಮ ಜನರೇ ಆದ ಕಲೆಕ್ಟರ, D.S.P. ಮೊದಲಾದ ಸರಕಾರೀ ನೌಕರರು ನಮ್ಮ ಜನರ ಮೇಲೆ ಗುಂಡು ಸಹ ಹಾಕಲಿಕ್ಕೆ ಹಿಂಜರಿಯಲಿಲ್ಲ. ಅದೇ ಅಮಲ್‌ದಾರರು ಈ ಕಾಂಗ್ರೆಸ್ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಸಂದೇಶದ ಪ್ರಕಾರ ಟ್ಯಾಕ್ಸನ್ನ ವಸೂಲು ಮಾಡುವದೂ ಮತ್ತು ತಮ್ಮ ಪ್ರಸಿದ್ಧಿಗೆ ವೃತ್ತ ಪತ್ರಗಳಲ್ಲಿ ಪ್ರಸಿದ್ಧಿಮಾಡಿಕೊಳ್ಳುವದೂ ಇದಲ್ಲದೆ ವರ್ಷದಲ್ಲಿ ಒಂದೆರಡು ಸಾರೆ ಕೈಯಲ್ಲಿ ಉಡಗೋಲು (Sweeper) ಹಿಡಿದು ಓಣಿ ಉಡುಗುವ ಸೋಂಗವನ್ನು ಮಾಡಿ ಫೋಟೋಗಳನ್ನು ತೆಗೆದುಕೊಳ್ಳುವದೂ ಮಾಡುತ್ತಿರುವರು. ಟ್ಯಾಕ್ಸು ಹೇರುವಾಗ ವಸೂಲುಮಾಡುವಾಗ ಬಡ ರೈತರಿಗೆ ತ್ರಾಸವಾಗುತ್ತದೆ. ಅದನ್ನು ವಿಚಾರಿಸದೆ ಕಾಯಿಸಿದೆಗಳನ್ನು ಸರಕಾರ ಮತ್ತು ನೌಕರರು ತಯಾರು ಮಾಡಿ ಅಮಲಿನಲ್ಲಿ ತರಲು ಪ್ರಯತ್ನ ಮಾಡುತ್ತಾರೆ.

ಈಗ ಇರುವ ಕಾಂಗ್ರೆಸ್ ಸರಕಾರದ ಇಚ್ಛೆಯಂತೆ ನೌಕರರು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಈ ಮಸೂದೆಯನ್ನು ಮಂಡಿಸುವಾಗ ಹೇಳಿದ ಹಾಗೆ, ಎಲ್ಲ ಕಡೆಯಲ್ಲಿ ಒಂದೇ ರೀತಿಯ ಕಾನೂನು ಜಾರಿಯಲ್ಲಿ ಬರುವಂತೆ ಸಮನ್ವಯ ಮಾಡಬೇಕೆಂಬ ಉದ್ದೇಶವಿದೆ ಎಂದು ಹೇಳಲಾಗಿದೆ. ಅಡ್ಮಿನಿಸ್ಟ್ರೇಷನ್ನಿನಲ್ಲಿ ಒಮ್ಮೆಲೆ ಯೂನಿಫಾರ್ಮಿಟಿ ತರುವ ಉದ್ದೇಶದಿಂದ ಈಗ ತಂದಿರುವ ಕಾನೂನಿನ ಪರಿಣಾಮ ಏನಾಗುತ್ತದೆ ಎಂದರೆ ಬಡವರಿಗೆ ಹೆಚ್ಚು ಟ್ಯಾಕ್ಸ್ ಬೀಳುತ್ತದೆ. ಆದ ಕಾರಣ ಬಡವರ ಮೇಲೆ ಹೆಚ್ಚು ಟ್ಯಾಕ್ಸ್ ಹಾಕದೆ ಶ್ರೀಮಂತ ಜನರ ಮೇಲೆ ಹೆಚ್ಚು ಟ್ಯಾಕ್ಸ್ ಬೀಳುವಂತೆ ಪ್ರಯತ್ನ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಆದುದರಿಂದ ಕಡಿಮೆ ಜಮೀನು ಇರುವವರಿಗೆ ಈ ತೆರಿಗೆಯ ವಿನಾಯಿತಿ ದೊರೆಯಬೇಕೆಂದು ನಾನು ಹೇಳಬಯಸುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಈಗ ಸಭೆಯ ಮುಂದೆ ಇರತಕ್ಕಂಥ ಈ ಮಸೂದೆಯನ್ನು ವಿರೋಧಿಸದೆ ವಿಧಿಯಿಲ್ಲ. ಈ ಮಸೂದೆಯು ಸೆಲೆಕ್ಟ್ ಕಮಿಟಿಗೆ ಹೋದಾಗ ಸೆಲೆಕ್ಟ್ ಕಮಿಟಿಯ ಸದಸ್ಯರು ಸರಿಯಾಗಿ ಪರಿಶೀಲನೆ ಮಾಡುವರೆಂದು ನಾನು ನಂಬಿದ್ದೇನೆ. ಈ ಮಸೂದೆಯಲ್ಲಿ ಕಾಂಟ್ರಿಬ್ಯೂಷನ್ ಯಾವ ರೀತಿಯಾಗಿ ವಸೂಲುಮಾಡಬೇಕೆಂಬುದನ್ನು ನಮೂದಿಸಿದ್ದು ಅಷ್ಟು ಸ್ಪಷ್ಟವಾಗಿಲ್ಲ, ದೊಡ್ಡ ದೊಡ್ಡ ಪ್ರೊಜೆಕ್ಟುಗಳ ಸಲುವಾಗಿ ಖರ್ಚುಮಾಡತಕ್ಕಂಥ ಹಣದ ಮೇಲೆ ಎಷ್ಟು ಬಡ್ಡಿ ಬರಬೇಕು ಎಂಬುದನ್ನು ನೋಡಲಾಗುತ್ತಿದೆ. ಅಷ್ಟು ಬಡ್ಡಿ ಬಾರದೇ ಇದ್ದರೆ ಅಂಥ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವದಿಲ್ಲ. ಈ ಮಸೂದೆಯ ಪ್ರಕಾರ ಕಾಂಟ್ರಿಬ್ಯೂಷನ್ ಪದ್ಧತಿಯು ಇರುವದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ.

ಉದಾಹರಣೆಗಾಗಿ ಈಗ ರಾಯಚೂರು ಜಿಲ್ಲೆಯನ್ನು ತೆಗೆದುಕೊಳ್ಳೋಣ, ಅಥವಾ ಕೋಲಾರ ಜಿಲ್ಲೆಯನ್ನು ತೆಗೆದುಕೊಳ್ಳೋಣ. ಇಂತಹ ಕ್ಷಾಮ ಪ್ರದೇಶಗಳನ್ನು Declare ಮಾಡುವಾಗ ನೀವು ಬಂದು ಇದನ್ನು ಜಾರಿಗೆ ತಂದರೆ ಜನಗಳಿಗೆ ಅನುಕೂಲವಾಗು

(ಶ್ರೀ ಯು. ಎಂ. ಮಾದಪ್ಪ)

ವುದಿಲ್ಲ. ಈ ವರ್ಷದಿಂದಲೇ ಈ ಸೌಲಭ್ಯ ದೊರೆಯುವುದಿಲ್ಲ. ಮತ್ತು Retrospective ಆಗಿ effectಗೆ ಕೊಡಬೇಕಾಗಿದೆ ಎಂದು ಕೇಳಿದ್ದೀರಿ. 1944ನೇ ಇಸವಿಯಿಂದ ಎಷ್ಟೋ ಪ್ರೊಜೆಕ್ಟುಗಳನ್ನು ತೆಗೆದುಕೊಂಡಿದೆ. ಅವನ್ನು ತೆಗೆದುಕೊಂಡು ಅವುಗಳ ಕೆಲಸ ಅಷ್ಟು ಆಗಿರಲಿ, ಆಗಿಲ್ಲದಿರಲಿ ಹೀಗೆ Retrospective ಆಗಿ ಕೊಡಬೇಕೆನ್ನುವುದು ಈ ಮಸೂದೆಯಲ್ಲಿರುವುದರಿಂದ ಅನ್ಯಾಯವಾಗುತ್ತದೆ.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮರಾಮತ್ತು ಇಲಾಖೆಯ ಮಂತ್ರಿಗಳು).—ಆಗುವುದಿಲ್ಲ, ಅದು ಬರೀ ತಪ್ಪು ಅಭಿಪ್ರಾಯ.

ಶ್ರೀ ಯು. ಎಂ. ಮಾದಪ್ಪ.—ಅನ್ಯಾಯವಾಗುವುದಿಲ್ಲವೆಂದು ತಾವು ಹೇಳುತ್ತೀರಿ. ಅದು ಹೇಗೆ ಆಗುವುದಿಲ್ಲವೆಂದು ಹೇಳುತ್ತೀರೋ ನನಗೆ ತಿಳಿಯುವುದಿಲ್ಲ. 1944ನೆಯ ಇಸವಿಯಿಂದ ತಾವು ತೆಗೆದುಕೊಂಡರೆ ಎಷ್ಟೋ ಆಗಿಯೇ ಆಗುತ್ತದೆ. ಮತ್ತು ಹೀಗೆ ಆಗುವುದರಿಂದ ಕ್ಷಾಮ ಪ್ರದೇಶಗಳಲ್ಲಿ ತಾವು ತೆಗೆದುಕೊಳ್ಳುವಾಗ ಈ ತತ್ವವನ್ನು ಅಳವಡಿಸಿಕೊಳ್ಳುವುದು ಬಹಳ ತೊಂದರೆಯಾಗುತ್ತದೆ. ಇದನ್ನು ಸರಕಾರ ಯಾವ ರೀತಿಯಿಂದಲಾದರೂ ಸರಿಪಡಿಸಬೇಕೆಂಬ ಸಲಹೆಯನ್ನಿಡಲು ಇಷ್ಟಪಡುತ್ತೇನೆ.

ಇನ್ನು ಎಲ್ಲ ಪ್ರಾಜೆಕ್ಟುಗಳಿವೆಯೋ; ಎಲ್ಲಿ ನೀರು ಕೊಡಬೇಕೋ ಆ ಪ್ರದೇಶದಲ್ಲಿ ಆ ಭೂಮಿಯ ಬೆಲೆ ಹೆಚ್ಚುತ್ತದೆ ಎಂದು ತಾವೇ ಹೇಳಿದ್ದೀರಿ. ಭೂಮಿಯ ಬೆಲೆ ಹೆಚ್ಚಾಗುತ್ತಿದ್ದರೆ ಯಾವ ಯಾವ ತರಹದ ಭೂಮಿಯಿದೆಯೋ ಆ ಭೂಮಿಗಳಿಗನುಗುಣವಾಗಿ, ಆ ಬೆಲೆಗಳು ಹೆಚ್ಚುತ್ತವೆ. ಕೆಂಪು ಮಣ್ಣಿದೆ, ಕಪ್ಪು ಮಣ್ಣಿದೆ. ಹೀಗೆ ನಾಲ್ಕು ತರಹ ಮಣ್ಣುಗಳು ಇವೆ ಎಂದು ನಿರ್ಧರಿಸಿರುವುದು ತಮಗೂ ಗೊತ್ತಿದೆ. ಈ Fertility of Soil ಅದಕ್ಕೆ ತಕ್ಕಂತೆ Contribution, Valuation of land ಇವುಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರೈತನಿಗೆ ತೊಂದರೆಯಾಗುತ್ತದೆ. ಇದರಿಂದ ಹೆಚ್ಚಿಗೆ ಹಣ ಬರುವುದಕ್ಕೆ ತೊಂದರೆಯಾಗುತ್ತದೆ. ಹಣವೇ ಮುಖ್ಯವಾಗಿ ಇಟ್ಟುಕೊಂಡಿರಬಾರದು; ಅದನ್ನು ಇಟ್ಟುಕೊಳ್ಳದೆ ಈ ವಿಷಯದಲ್ಲಿ ಸಾರ್ವಜನಿಕರ ಮತ್ತು ರೈತರ ಹಿತದೃಷ್ಟಿಯಿಂದ Soil fertility ಆಧಾರದ ಮೇಲೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಹಾಗೆ ಮಾಡಬೇಕಾಗಿದ್ದರೆ ಕಾನೂನಿನ ಪ್ರಕಾರ ಸರ್ವೆ ಡಿಪಾರ್ಟ್‌ಮೆಂಟಿಗೆ ಅಧಿಕಾರವಿದೆಯೇ ಎಂದರೆ ಆ ಡಿಪಾರ್ಟುಮೆಂಟಿಗೆ ಕೊಟ್ಟಿಲ್ಲ.

ಇವೊತ್ತು ಪ್ರಶ್ನೋತ್ತರ ಸಮಯದಲ್ಲಿ ಚಿಕ್ಕ ಹೊಳೆ ಯೋಜನೆ ವಿಷಯವಾಗಿ ಮಾನ್ಯ ಸಚಿವರು ಉತ್ತರ ಕೊಡುವಾಗ ಎಕರೆಗೆ 750 ರೂಪಾಯಿಗಳಂತೆ ಮಾಡಲಾಗಿದೆ ಎಂದು ತಿಳಿಸಿದಿರಿ. ಯಾವ ಆಧಾರದ ಮೇಲೆ ಹಾಕಿದ್ದೀರಿ? ಎಷ್ಟು ಹಣ ಯೋಜನೆಗಾಗಿ ಖರ್ಚು ಮಾಡಿದೆಯೋ ಅಷ್ಟನ್ನು ತೆಗೆದುಕೊಂಡು ಒಂದು ಆಧಾರದ ಮೇಲೆ ತಾವು ನಿಗದಿ ಮಾಡಿದ್ದೀರಿ. ಆದರೆ ಪ್ರೊಜೆಕ್ಟನ್ನು ಕಟ್ಟಿದ ಮೇಲೆ ವ್ಯವಸಾಯಕ್ಕೆ ಬರತಕ್ಕಂತಹ ಮತ್ತು ಬಾರದಂತಹ ಆಧಾರದ ಮೇಲೆ ಎಷ್ಟು ಭೂಮಿಗಳು ಉಪಯೋಗಕ್ಕೆ ಬಂದಾವು ಎಂಬುದನ್ನು ತಿಳಿಯಬೇಕಾಗಿದೆ. ಎಲ್ಲ ದೃಷ್ಟಿಯಿಂದಲೂ ಇದನ್ನು ಪರಿಶೀಲಿಸಬೇಕು. ಈಗ ನಮಗೆ ಏನಾಗಿದೆ ಎಂದರೆ ಖರ್ಚು ಎಷ್ಟು ಆಗಿದೆಯೋ ಆ ಖರ್ಚಿನ ಆಧಾರದ ಮೇಲೆ ತಾವು Levy ಮಾಡಿದ್ದೀರಿ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ನೀವು ಹೇಳುತ್ತಿರುವುದು ಸರಿಯಲ್ಲ.

ಶ್ರೀ ಯು. ಎಂ. ಮಾದಪ್ಪ.—ನಾವು ಎಷ್ಟು ಹೇಳಿದರೂ ತಾವು ಒಪ್ಪಿಕೊಳ್ಳುವುದಿಲ್ಲ. ತಾವು ಒಪ್ಪಿಕೊಳ್ಳದಿದ್ದರೆ, ನಾವು ಹೇಳುವುದು ಸರಿಯಾಗಿಲ್ಲ ಎಂದು ಹೇಳಬೇಕಾಗಿದೆ; ಮತ್ತು ಈಗ ನಮ್ಮಲ್ಲಿ ನಿಮ್ಮನ್ನು ಒಪ್ಪಿಸುವುದಕ್ಕೆ ಅಂಕಿ ಅಂಶಗಳು ಇಲ್ಲ. ನಾವು ಹೇಳಿದರೆ ಸಂಬಂಧಪಟ್ಟ ಮಂತ್ರಿಗಳು ಒಪ್ಪುತ್ತಾರೆಯೇ? ಒಪ್ಪಿಕೊಳ್ಳುವುದಿಲ್ಲ. ಯಾವ ಆಧಾರದ ಮೇಲೆ ಈ ಬಿಲ್ಲಿನಲ್ಲಿ ನೀವು ನಿಗದಿ ಮಾಡಿದ್ದೀರಿ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು water-rateನ ವಿಷಯ. ಈ water-rate ಅನ್ನು ಭೂಮಿಯಮೇಲೆ ಹಾಕುವ ತೆರಿಗೆಯಲ್ಲ ಎಂದು ತಿಳಿಸಿದ್ದೀರಿ. ಆದರೆ ತಾವು ಇಲ್ಲಿ ಇಟ್ಟಿರತಕ್ಕ ಒಂದು ತತ್ವವನ್ನು ಅವಲೋಕಿಸಿ ನೋಡಿದರೆ, ನನಗೆ ಕಾಣಿಸುವುದು ಏನೆಂದರೆ, ನೀರು ಈಗ ಕೊಡುತ್ತಿರುವುದು ಖರೀದಿಗೆ ಎಂದು (Charges) ಆಗುತ್ತದೆ. ಎಂದರೆ ನಾವು ಖರೀದಿಯನ್ನು ಕೊಟ್ಟು ನೀರನ್ನು ತೆಗೆದುಕೊಂಡ ಹಾಗಾಗುತ್ತದೆ. ನೀರಿಗಾಗಿ ಇಷ್ಟೇ ಖರ್ಚುಮಾಡಿರಬೇಕೆಂದು ನೀವು ಯೋಚನೆಮಾಡಿರಬೇಕು. ಹಾಗೆ ಯೋಚನೆಮಾಡಿದ್ದರೂ ಇದು Tax ಅಲ್ಲ ಎಂದು ವಾದಮಾಡುತ್ತೀರಿ. ಇದು ವಾಟರ್ ಚಾರ್ಜೇ ಅಥವಾ ಟ್ಯಾಕ್ಸೇ ಎನ್ನುವುದನ್ನು ಸ್ವಲ್ಪ ಯೋಚನೆಮಾಡಬೇಕು. ಇದು Charge ಅಲ್ಲ Tax ಎಂದು ನಾನು ಹೇಳಬೇಕಾಗಿ ಬರುತ್ತದೆ. ಏಕೆಂದರೆ, Contribution ಈಗಿರತಕ್ಕ ಬಿಲ್ಲಿನ ಪ್ರಕಾರ ನಿಮಗೆ ಹತ್ತಿರ ಎಷ್ಟು ಖರ್ಚಾಗುತ್ತೋ ಅಷ್ಟನ್ನು ವಸೂಲುಮಾಡಿಕೊಳ್ಳುತ್ತೀರಿ. water rate ಎಷ್ಟು ವಸೂಲು ಮಾಡಬೇಕೆಂದು ಹೇಳಿಲ್ಲ. ರೂಲ್ಸನಲ್ಲಿ ಬೇಕಾದಷ್ಟು ಮಾಡಿಕೊಳ್ಳಲು ಅವಕಾಶವಿದೆ. ಆ ರೀತಿ ರೂಲ್ಸಿನಲ್ಲಿ ಅವಕಾಶ ಮಾಡುವುದು ಸರಿಯಲ್ಲ. ಈಗ ಈ ಮಸೂದೆಯು ಸೆಲೆಕ್ಟ್ ಕಮಿಟಿಗೂ ಹೋಗುತ್ತಿರುವುದರಿಂದ, ಸೆಲೆಕ್ಟು ಕಮಿಟಿಯವರೂ ಇಷ್ಟೇ. Water Rate ಹಾಕಬೇಕೆಂಬುದನ್ನು ಯೋಚನೆಮಾಡಬೇಕು. ಆದುದರಿಂದ ನಾನು ಹೇಳಿದ ಈ ವಿಷಯಗಳನ್ನು ಸೂಕ್ತವಾಗಿ ಸೆಲೆಕ್ಟು ಸಮಿತಿಯ ಸದಸ್ಯರುಗಳು ಪರಿಶೀಲಿಸಬೇಕೆಂದು ಈ ಮೂಲಕ ತಿಳಿಯಪಡಿಸುತ್ತೇನೆ. ರೂಲ್ಸುಗಳನ್ನು ಮಾಡುವಾಗ ಈ ರೇಟುಗಳ ವಿಷಯದಲ್ಲಿ ಸೆಲೆಕ್ಟು ಸಮಿತಿಯವರು ಹೆಚ್ಚಾಗಿ Executiveಗೆ ಬಿಡದೆ ಒಂದು ಉತ್ತಮವಾದ ಕಾನೂನನ್ನು ಮಾಡಿ ಈ ಶಾಸನ ಸಭೆಗೆ ಕಳುಹಿಸುತ್ತಾರೆಂದು, ಇಷ್ಟನ್ನು ಹೇಳಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಪಿ. ಡಬ್ಲ್ಯು. ಡಿ. ಮಿನಿಸ್ಟರು ಹಿಂದೆ ಈ ವಾಟರು ರೇಟಿನ ವಿಚಾರದಲ್ಲಿ ಮಾನ್ಯ ಸದಸ್ಯರಾಗಿದ್ದಾಗಲೂ ಹೇಳಿದ್ದಾರೆ. ಹಿಂದೆ ಕೆಂಗೇರಿಯಿಂದ ಬೆಂಗಳೂರಿನವರೆಗೆ, ಮಂಡ್ಯದಿಂದ ಬೆಂಗಳೂರಿನವರೆಗೆ ಒಂದು ರೈತರ ತಂಡ ಬಂದಿತ್ತು. ಹಿಂದೆ ನಾನು ಪೋಲೀಸು ಇನ್ಸಪೆಕ್ಟರಾಗಿದ್ದಾಗ ಇದನ್ನು ನೋಡಿದ್ದೆ. ಆಗ ರೈತರ ವಿಚಾರದಲ್ಲಿದ್ದಂತಹ ಮನಸ್ಸು ಈಗ ಮಿನಿಸ್ಟರಾಗಿ ಬಂದ ಮೇಲೆ ಎಲ್ಲಿ ಹೋಯಿತು ಎಂದು ಕೇಳಬೇಕಾಗಿದೆ. ಇನ್ನೊಂದು ವಿಷಯ ಈ ವಾಟರು ರೇಟು ಏನು ಎನ್ನುವುದನ್ನು ಈ ಬಿಲ್ಲಿನಲ್ಲಿ ಡಿಫೈನು ಮಾಡಿಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಅದನ್ನು ರೂಲ್ಸಿನಲ್ಲಿ ಮಾಡಲಾಗುತ್ತದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ರೂಲ್ಸಿನಲ್ಲಿ ಮಾಡುತ್ತೇನೆಂದು ಹೇಳುತ್ತೀರಲ್ಲ, ಹಿಂದೆ ಇವೆಲ್ಲ ಇರಿಗೇಷನ್ ಆಕ್ಟಿನಲ್ಲಿತ್ತು. ಅದೇ ರೀತಿ ಈ ಆಕ್ಟಿನಲ್ಲಿಯೂ ಇರಬೇಕಾಗಿತ್ತು. ಆ ರೀತಿ ಮಾಡಿದ್ದರೆ ಈ ಕಷ್ಟಗಳು ಬರುತ್ತಿರಲಿಲ್ಲ. ಮೊದಲಿನಿಂದಲೂ ನಾನು, ಈ ಸರಕಾರದ ಮೇಲೆ ಟೀಕೆ ಮಾಡಬೇಕೆಂದಲ್ಲ, ರೈತರ ಕಷ್ಟಗಳು ಹೇಗಿವೆ ಎಂಬುದನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ರೂಲ್ಸು ಮಾಡುವಾಗ ಯಾವ ಯಾವ ರೇಟಿನಂತೆ ಇದೆ ಎನ್ನುವುದನ್ನು ಮಾಡುವುದಕ್ಕಿಂತ ಈ ಕಾನೂನಿನಲ್ಲಿಯೇ ಸೇರಿಸಿದ್ದರೆ ಅನುಕೂಲವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಈಗ ನಮ್ಮಲ್ಲಿರುವ ಸೇಲ್ಸ್ ಟ್ಯಾಕ್ಸು ಮತ್ತು ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸಿನ ಬಿಲ್ಲುಗಳಲ್ಲಿ ಈ ರೀತಿಯಾಗಿ ವಿವರಗಳೆಲ್ಲ ಇವೆ. ಅದರಂತೆ ಇದರಲ್ಲೂ ಇರಬೇಕಾದುದು ಅವಶ್ಯಕ. ಸೆಕ್ಷನ್ನು 2 ರಲ್ಲಿ 'Mulgeni tenant in the South Canara District' ಎಂದಿದೆ. ಅದರಂತೆ ಮೈಸೂರು ಸ್ಟೇಟಿನಲ್ಲಿರುವ ತೀರ್ಥಹಳ್ಳಿಯ ಸುತ್ತಮುತ್ತ ಈ ರೀತಿಯಾದ ಮೂಲಗೇಣಿ ಟೆನೆಂಟುಗಳು ಇದ್ದಾರೆ. ಸೌತ್ ಕ್ಯಾನರಾ ಪ್ರದೇಶಗಳಿಗೆ ರೂಲುಗಳನ್ನು ಮಾಡುವಾಗ ಈ ಪ್ರದೇಶಗಳಿಗೂ ಅನ್ವಯವಾಗುವಂತೆ ಮಾಡಬೇಕೆಂದು ಕೋರುತ್ತೇನೆ. ಆ ರೀತಿ ಜಾಗ್ರತೆ ಮಾಡಿಸಿದರೆ ಸಂತೋಷ.

In Section 4,

"*Amount of Betterment Contribution*"

1. Subject to such rules as may be prescribed the Collector shall determine the contribution payable in respect of each of the lands mentioned in section 3, after taking into account the increase in its capital value......"

ಇಲ್ಲಿ ಬರೀ ಕ್ಯಾಪಿಟಲ್ ವ್ಯಾಲ್ಯು ಮೇಲೆ ತಮ್ಮ ಗಮನ ಹೋಗಿದೆಯೇ ವಿನಾ ಕೆರೆಗಳಲ್ಲಿ ನೀರಿದೆಯೇ ಮತ್ತು ಅದು ಸಾಕಾಗುವಷ್ಟು ನೀರನ್ನು ಸಪ್ಲೈ ಮಾಡುತ್ತಿದೆಯೇ ಇಲ್ಲವೇ ಎಂಬುದರ ಕಡೆ ತಮ ಗಮನ ಹೋಗಿಲ್ಲ. ಇದನ್ನು ಪರಿಷ್ಕೃತ ಮಾಡುವುದಕ್ಕೋಸ್ಕರ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

10 A.M.

ತುಮಕೂರು ತಾಲ್ಲೋಕು ಬೆಳದರ ಗ್ರಾಮದ 20 ಯೂನಿಟ್‌ಗಳ ಕೆರೆ ರೆಸ್ಟೋರೇಷನ್ ಆದಮೇಲೆ ನೀರುಕೊಡದೆ 70 ಎಕರೆಗಳಮೇಲೆ ತೆರಿಗೆ ವಿಧಿಸಿದ್ದಾರೆ. ಈ ವಿಚಾರವಾಗಿ ರೆವಿನ್ಯೂ ಮಿನಿಸ್ಟರ ಮುಂದೆ ಅಪೀಲು ಬಂದಿದೆ. ಇಷ್ಟೇ ವಾಟರ್‌ರೇಟ್ ಹಾಕಬೇಕು ಎನ್ನುವ ವಿಚಾರದಲ್ಲಿ ಇರಿಗೇಷನ್ ಆಕ್ಟ್ ಮೇಲೆ ರೂಲ್ ಮಾಡದೆ ಇರುವುದರಿಂದ ಈ ರೀತಿ ಅನಾಹುತ ಆಗುವುದಕ್ಕೆ ಅವಕಾಶವಾಗಿದೆ. ತುರುವೇಕೆರೆ ತಾಲ್ಲೂಕು ಸಾರಿಗೇಹಳ್ಳಿ ಅಮಾನಿ ಕೆರೆಯ ವಿಚಾರದಲ್ಲಿಯೂ ಇದೇ ಪರಿಸ್ಥಿತಿ ಇದೆ.

Mr. SPEAKER.—The House will now rise for lunch and meet again at 10-30 A.M.

The House adjourned for Lunch at Ten of the Clock and meet again at Thirty Minutes past Ten of the Clock.

[MR. SPEAKER in the Chair]

ಶ್ರೀ ಜಿ. ಎಸ್. ಪುಟ್ಟಣ್ಣ.—ಸ್ವಾಮಿ, ನಾನು ಹೇಳಿದ್ದು ವಾಟರ್ ರೇಟ್ ಎನ್ನುವುದನ್ನು ಡಿಫೈನ್‌ಮಾಡಿಲ್ಲ ಎಂದು. ಯಾವ ಯಾವ ಸಂದರ್ಭದಲ್ಲಿ ಎಷ್ಟು ರೇಟು ಹಾಕಬೇಕು ಎಂಬುದು ಆಕ್ಟಿನಲ್ಲಿ ಕೂಡ ಬರಬೇಕು. 10 ಸಾವಿರ ರೂಪಾಯಿಗಳು ಖರ್ಚಾದರೂ ಕ್ಯಾಪಿಟಲ್ ಔಟ್‌ಲೆ ಮೇಲೆ ಎಷ್ಟು ಪರ್ಸೆಂಟ್ ಬೀಳಬೇಕು ಎನ್ನುವ ನೀತಿಯನ್ನು ಆಕ್ಟಿನಲ್ಲಿ ಕಾಣಿಸಬೇಕು. ಈ ಆಕ್ಟಿನಲ್ಲಿ ಆ ರೀತಿ ಮಾಡಿಲ್ಲ. ಎರಡು-ಮೂರು ಉದಾಹರಣೆಗಳನ್ನು ಕೊಡುತ್ತೇನೆ. ತುಮಕೂರು ತಾಲ್ಲೋಕು ಬೆಳದರ ಗ್ರಾಮದ ಕೆರೆ ರೆಸ್ಟೋರ್ ಮಾಡಲು 8 ಸಾವಿರ ರೂಪಾಯಿಗಳಿಗೆ ಮೊದಲು ಎಸ್ಟಿಮೇಟ್ ಆಯಿತು. ಆಮೇಲೆ ರೆವಿನ್ಯೂ ಇನ್‌ಸ್ಪೆಕ್ಟರ್ ಮಹಜರ್ ನಡೆಸಿ ರೈತರು ಅರ್ಧಭಾಗ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಮಾಡಿದರಂತೆ. ಎರಡನೆಯ ಎಸ್ಟಿಮೇಟ್ 25 ಸಾವಿರಕ್ಕೆ ಹೋಯಿತಂತೆ. ಈಗ ರೈತರಿಗೆ ವಿಪರೀತ ಕಿರುಕುಳ ಆಗಿದೆ. ಇದರಮೇಲೆ ಅಪೀಲ್ ಹೋಗಿದ್ದಾರೆ. ಸರ್ಕಾರದವರು ಇರಿಗೇಷನ್ ಆಕ್ಟಿಗೆ ಇನ್ನೂ ರೂಲ್ಸ್‌ಮಾಡದೆ ಇರುವುದರಿಂದ ಹೀಗೆ ರೈತರಿಗೆ ತೊಂದರೆಯಾಗುತ್ತಿದೆ. ಗುಬ್ಬಿ ತಾಲ್ಲೂಕು, ಇರಕಸಂದ್ರ, ಕೊರಟಗೆರೆ ತಾಲ್ಲೂಕು, ದಾಸಲಕುಂಟೆ ಗ್ರಾಮಗಳ ರೈತರಿಗೂ ಜಾಸ್ತಿ ರೇಟ್ ಹಾಕಿದ್ದಾರೆ. ರೈತರಿಗೆ ಇರುವ ಕಿರುಕುಳ ಎಷ್ಟು ಎಂದು ಆಲೋಚನೆಮಾಡಿದರೆ ಗೊತ್ತಾಗುತ್ತದೆ. ಕ್ಲಾಸ್ (4) ರಲ್ಲಿ ಕ್ಯಾಪಿಟಲ್ ವ್ಯಾಲ್ಯು ವಿಚಾರ ಅಪ್ಪಣೆಕೊಡಿಸಿದ್ದೀರೇ ವಿನಾ availability of water ಅಥವಾ unit of water ವಿಚಾರ ಹೇಳಿಲ್ಲ. ತುಮಕೂರು ತಾಲ್ಲೋಕಿನಲ್ಲಿರುವ ಬೆಳದರ ಕೆರೆಯ ಕ್ಯಪ್ಯಾಸಿಟಿ 20 ಯೂನಿಟ್ಟೇ ಇದ್ದರೂ 70 ಎಕರೆವರೆಗೆ ಕಂದಾಯ ವಸೂಲು ಮಾಡುತ್ತಿದ್ದಾರೆ. ಅಲ್ಲಿ ನೀರನ್ನ 8-10 ವರ್ಷಗಳಿಂದ ಗದ್ದೆಗಳಿಗೆ ಸಪ್ಲೈಮಾಡಿಲ್ಲ. ಕ್ಯಾಪಿಟಲ್ ವ್ಯಾಲ್ಯು ಜೊತೆಗೆ availability of water ಅಥವಾ unit of water available to irrigate lands ಗಣನೆಗೆ ತೆಗೆದುಕೊಳ್ಳಬೇಕೆಂದು ಆಕ್ಟಿನಲ್ಲಿ ಸೂಚನೆ ಮಾಡಿಲ್ಲ. ಕ್ಲಾಸ್ (4) ರಲ್ಲಿ "Any order passed by the prescribed authority on appeal preferred to it under Sub-Section (3) and subject to the orders aforesaid of the prescribed authority, the determination of the Collector under sub-section (1) shall be final" ಎಂದು ಹೇಳಿದ್ದೀರಿ. ಇಲ್ಲಿ ಏನಾಗುತ್ತದೆ ಎಂದರೆ ರೂಲ್ಸ್ ಮಾಡಿದ ಹೊರತು ಕಲೆಕ್ಟರ್ ಅಥವಾ ಡೆಪ್ಯುಟಿ ಕಮೀಷನರಿಗೆ ಫುಲ್‌ಪವರ್ ಇರುತ್ತದೆ ಎಂದು ಅರ್ಥವಾಗುತ್ತದೆ. ಈ ಅಂಶ ರೂಲ್ಸ್‌ನಲ್ಲಿ ಇರುವುದಕ್ಕಿಂತ ಆಕ್ಟಿನಲ್ಲಿ ಇರಬೇಕೆಂದು ನನ್ನ ಅಭಿಪ್ರಾಯ. ಕ್ಲಾಸ್ (5) ರಲ್ಲಿ ಹೀಗೆ ಹೇಳಿದೆ. "Contribution shall become payable under this Act on a written notice of demand issued by an officer authorised by the

(ಶ್ರೀ ಜಿ. ಎಚ್. ಪುಟ್ಟಣ್ಣ)

Government in this behalf being served on the land-holder" ಎಸ್ಟಿಮೇಟ್ ಮಾಡಿ ದಾಗಲೇ ಕಾಂಟ್ರಿಬ್ಯೂಷನ್ ಕೊಡಬೇಕೇ ಅಥವಾ ಕೆರೆಕಟ್ಟೆಯಾದಮೇಲೆ ಕೊಡಬೇಕೇ ಎಂಬುದನ್ನು ವಿಶದಪಡಿಸಿಲ್ಲ. Should it not be clear? ನೀರು ಸಪ್ಲೈ ಆದಮೇಲೆ ಅಥವಾ ಒಂದು ಬೆಳೆ ಬಂದಮೇಲೆ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳುತ್ತೀರಾ? ಅಥವಾ ಏಕದಂ ರೈತರು ಆ ಹಣವನ್ನು ಕೊಡಬೇಕೇ ಎಂಬು ದೊಂದನ್ನೂ ವಿವರವಾಗಿ ತಿಳಿಸಿಲ್ಲ. ಹಾಗೆ ತಕ್ಷಣ ಕೊಡಬೇಕೆಂದರೆ ರೈತರಿಗೆ ಕಷ್ಟವಾಗುತ್ತದೆ. The definition must make it very clear. Law must be very clear in all respects. ಬೇಕಾದರೆ ಒಂದು ವರ್ಷವ ಕ್ರಾಪ್ ಬಂದ ಮೇಲೆ ಅದನ್ನು ತೆಗೆದುಕೊಳ್ಳಬೇಕೆಂದು ಒಂದು ಪ್ರಾವಿಸೋ ಮಾಡಿ. ಕ್ಲಾಸ್ (7) ರಲ್ಲಿ "It is a charge" ಎಂದು ಹೇಳುತ್ತೀರಿ. Water rate and contribution cannot be a paramount charge on the land. The interest on the land can be liable for sale and not the entire land ಹಾಗೆ ಹೇಳತಕ್ಕದ್ದು ಸರಿಯಲ್ಲ ಎಂದು ಹೇಳು ತ್ತೇನೆ. ಕ್ಲಾಸು 10 ರಲ್ಲಿ ಲೆವಿ ಆಫ್ ವಾಟರ್‌ರೇಟ್ ವಿಚಾರ ಹೇಳಿದ್ದಾರೆ. ಆದರೆ ಇಷ್ಟೇ ರೇಟ್‌ಕೊಡ ಬೇಕೆಂದು ಹೇಳಲಿಲ್ಲ. 10 ಸಾವಿರ 20 ಸಾವಿರ ಕ್ಯಾಪಿ ಟಲ್‌ಗೆ ಎಷ್ಟು ರೇಟ್ ಹಾಕಬೇಕು ಎಂಬುದು ಆಕ್ಟಿನಲ್ಲಿ ಬರಬೇಕು. ರೂಲ್ಸಿನಲ್ಲಿ ಬರುತ್ತದೆ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಇದು ಪ್ರತಿಯೊಂದೂ ಆಕ್ಟಿನಲ್ಲಿದೆ ಸೆಕ್ಷನ್ (10) ಕ್ಲಾಸ್ (2) ರಲ್ಲಿ "For the avoidance of doubt, it is hereby declared that water rate leviable under this Act is not a tax on land but is a charge for the water supplied or used for the irrigation of lands" ಎಂದು ಹೇಳಿದ್ದಾರೆ. Charge. ಎಂದರೆ ಪ್ಯಾರಾಮೌಂಟ್ ಚಾರ್ಜ್ ಆಗುತ್ತದೆ. It is only land revenue that is a paramount charge and any other tax or any cess cannot be a paramount charge. ಇದನ್ನು ತಾವು ನೋಡಬೇಕು. ಈ ಆಕ್ಟ್ ಜಾರಿಗೆ ಬರಬೇಕಾದ್ದು ನ್ಯಾಯವಾಗಿದೆ ಎಂದು ಒಪ್ಪಿಕೊಳ್ಳು ತ್ತೇನೆ. ಆದರೆ ಆಕ್ಟ್‌ಮಾಡುವುದಕ್ಕೆ ಮುಂಚೆ ವರ್ಡಿಂಗ್ಸ್ ನೋಡಬೇಕು. ಕ್ಲಾಸ್ (3) ರಲ್ಲಿ "land-holder" ವಿವರಣೆ ಕೊಟ್ಟಿದ್ದಾರೆ. ಅದು ಅರ್ಥವಾಗುವುದಿಲ್ಲ ಆಕ್ಟ್ ಮಾಡುವಾಗ ರೈತರಿಗೂ ಅದನ್ನು ಜಾರಿಗೆ ತರತಕ್ಕ ಆಫೀಸರುಗಳಿಗೂ ಅರ್ಥ ವಾಗುವಹಾಗಿರಬೇಕು. ಇದೇ ತಮ್ಮಲ್ಲಿ ನನ್ನ ಪ್ರಾರ್ಥನೆ.

ಸ್ವಾಮಿ, ಇನ್ನೊಂದು ವಿಚಾರ ತಮ್ಮ ಅನುಭವಕ್ಕೆ ಬಂದಿದೆ. ಕೆರೆಯ ತೂಬಿನ ಹತ್ತಿರ ಇರುವ ಜಮೀನಿಗೆ ಬೇಕಾದಷ್ಟು ನೀರು ಸಿಕ್ಕುತ್ತದೆ ದೂರ tail-end of the ಚಾನಲ್‌ನಲ್ಲಿರುವ ಜಮೀನುಗಳಿಗೆ ನೀರು ಇರುವು ದಿಲ್ಲ. ಇದರಿಂದ ವಿಪರೀತ ರೈತರಿಗೆ ನಷ್ಟವಾಗುತ್ತದೆ. ಅಂಥವರಿಗೆ ರಿಯಾಯಿತಿ ಕೊಡುತ್ತಾ ಇಲ್ಲ. ರೇಟ್ ಹಾಕುವಾಗ ಹತ್ತಿರ ಇರುವ ಜಮೀನಿಗೆ ಕೊಂಚ ಜಾಸ್ತಿಹಾಕಿ. ದೂರದಲ್ಲಿದ್ದು ನೀರು ಸಪ್ಲೈ ಆಗುವು ದಕ್ಕೆ ಕಷ್ಟವಾಗಿರುವ ಜಮೀನಿಗೆ ಕಡಿಮೆ ರೇಟ್ ಹಾಕ ಬೇಕು. ಎಲ್ಲರಿಗೂ ಯೂನಿಫಾರಂ ವಾಟರ್ ರೇಟ್ ಹಾಕಿದರೆ ಬಹಳ ತೊಂದರೆ ಆಗುತ್ತದೆ. ರೈತನ ಸ್ಥಿತಿ ಗತಿಗಳನ್ನು ನೋಡಿಕೊಂಡು ವಿದ್ಯಮಾನಗಳನ್ನು ನೋಡಿಕೊಂಡು ರೇಟ್ ಹಾಕಬೇಕು. ಇವೆಲ್ಲಾ ರೂಲ್ಸ್ ನಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ರೂಲ್ಸಿನಲ್ಲಿ ಕೊಟ್ಟರೆ ಸಂತೋಷ. ಇಲ್ಲದಿದ್ದರೆ tail end ನಲ್ಲಿರುವ ಜಮೀನುಗಳಿಗೆ ನೀರು ಸಪ್ಲೈ ಆಗದೆ ರೈತರು ತೊಂದರೆ ಪಡುತ್ತಾರೆ. ಆದರೂ ವಾಟರ್ ರೇಟ್ ಮತ್ತು ಕಂದಾಯ ಕೊಡಬೇಕು. ರೈತರು ಹೊಟ್ಟೆಗೆ ಅನ್ನ ವಿಲ್ಲದೆ ಸಾಯಬೇಗುತ್ತದೆ. ಕ್ಲಾಸ್ (4) ರಲ್ಲಿ "The contribution shall in no case exceed five hundred rupees ಎಂದು ಹೇಳಿದ್ದಾರೆ. ಒಬ್ಬ ಮನುಷ್ಯ 10 ಎಕರೆ ಜಮೀನು ಇದ್ದರೆ ಎಕರೆಗೆ 20 ರೂಪಾಯಿನಂತೆ ಕಾಂಟ್ರಿಬ್ಯೂಷನ್ ಕೊಟ್ಟರೆ 200 ರೂಪಾಯಿ ಆಗುತ್ತದೆ. 100 ಎಕರೆಗಳಿದ್ದರೂ 500 ರೂಪಾಯಿಗಳಿಗಿಂತ ಜಾಸ್ತಿ ಇಲ್ಲ ಎಂದು ಇಲ್ಲಿ ಅರ್ಥ ವಾಗುತ್ತಿದೆ. ಪ್ರತಿ ಒಂದು ಎಕರೆಗೆ ಇಷ್ಟು ಕೊಡ ಬೇಕು ಎಂದು ಇದರಲ್ಲಿ ಹೇಳಲಿಲ್ಲ. ಮತ್ತೊಂದು ವಿಚಾರ ಜಮೀನಿಗೆ ಜೋಪಿನ ನೀರು ಬರುತ್ತದೆ. ಅದಕ್ಕೂ ಸಂಪೂರ್ಣ ವಾಟರ್ ರೇಟ್ ಹಾಕಿದ್ದಾರೆ. ಇದನ್ನು ಹಾಗೆಯೇ ಫ್ರೀಯಾಗಿ ಅನುಭವಿಸಬಹುದು. ಮಳೆ ನೀರಿನಿಂದ ಬರಭತ್ತ ಬೆಳೆದರೂ ಅದೇ ಕಾಂಟ್ರಿಬ್ಯೂಷನ್ ಮತ್ತು ಕಂದಾಯ ಹಾಕುತ್ತಾರೆ. ಅದು appressive ಟ್ಯಾಕ್ಸೇಷನ್ ಆಗುತ್ತದೆ. ಅದನ್ನು ದಯವಿಟ್ಟು ನೋಡಬೇಕು. ಸರ್ಕಾರದ ವರು ಕೆರೆಗಳಲ್ಲಿರುವ ಪಾಶುವಾರು ಹರಾಜು ಮಾಡು ತ್ತಾರೆ. ಅದರಿಂದ ಬಂದ ಹಣವನ್ನು ಸರ್ಕಾರ ದವರು ತೆಗೆದುಕೊಳ್ಳುತ್ತಾರೆ. ದುರಸ್ತಿ ಆಗ ಬೇಕಾದರೆ ಅದರ ಖರ್ಚನ್ನು ಸರ್ಕಾರದವರು ವಹಿಸಿ ಕೊಳ್ಳುವುದಿಲ್ಲ. ಸರ್ಕಾರದವರು cost of amount incurred for restoration, if not repairs ಇಷ್ಟನ್ನಾದರೂ ವಹಿಸಿಕೊಳ್ಳಬೇಕು. ರೈತರೇ ಕೆರೆ ಮುಟ್ಟಾಣಿ ಮತ್ತು ಕಾಮಗಾರಿ ಕೆಲಸಮಾಡಬೇಕು ಎಂದು ಅಪ್ಪಣೆ ಕೊಡಿಸಿದರು. ಆದರೆ ಪಾಶುವಾರು ಹರಾಜುಮಾಡಿ ಸರ್ಕಾರದವರೇ ದುಡ್ಡನ್ನು ತೆಗೆದು ಕೊಳ್ಳುತ್ತಾರೆ. ಅದು ತಮ್ಮ ಅನುಭವಕ್ಕೆ ಬಂದಿರ ಬಹುದು. ಪ್ರತಿಯೊಂದು ಕೆರೆಯ ಕಾಮಗಾರಿಯನ್ನು Major or Minor ಎಲ್ಲವನ್ನೂ ಸರ್ಕಾರದವರೇ ವಹಿಸಿಕೊಳ್ಳಬೇಕು. ಇಲ್ಲದಿದ್ದರೆ ಕನ್ನಂಬಾಡಿ ಕಟ್ಟೆ, ತುಂಗಭದ್ರಾ ಪ್ರಾಜೆಕ್ಟ್ ಕಟ್ಟಿ ರೈತರ ಬಾಯಿಗೆ ಮಣ್ಣು ಹಾಕಿದಹಾಗಾಗುತ್ತದೆ. ಆದ್ದರಿಂದ ರೈತರಿಗೂ ಅನುಕೂಲಮಾಡಬೇಕು. ತುಮಕೂರು ತಾಲ್ಲೋಕು ಕುಂಕುಮನಹಳ್ಳಿ ಕೆರೆಯ ಕೆಳಗೆ ಮಳೆಯ ನೀರಿನಿಂದ ಬತ್ತದ ಬೆಳೆ ಇಟ್ಟು ಬೆಳೆದಿದ್ದಕ್ಕೆ ವಾಟರ್ ರೇಟ್ ಹಾಕಿದ್ದಾರೆ. ರೈತರ ಕಷ್ಟ ಸುಖಗಳನ್ನು ಗೌರ್ನ ಮೆಂಟ್ ನೋಡುತ್ತಾ ಇಲ್ಲ. ಮಳೆ ನೀರಿನಿಂದ ಬೆಳೆಯು ವುದಕ್ಕೂ ಟ್ಯಾಕ್ಸ್ ಹಾಕಿದ್ದಾರೆ. ಆಕ್ಟ್ ಪಾಸುಮಾಡಿ 10 ವರ್ಷ ಆದರೂ ರೂಲ್ಸ್ ಮಾಡುವುದಿಲ್ಲ. ಆದ್ದ ರಿಂದ ರೈತರಿಗೆ ತೊಂದರೆ ಇಲ್ಲದಂತೆ ಆಫೀಸರ ಅಧಿಕ ಪ್ರಸಂಗತನಕ್ಕೆ ಅವಕಾಶವಿಲ್ಲದಂತೆ ರೈತರಿಗೆ ಅನುಕೂಲಮಾಡುವಂತೆ ಆಕ್ಟನ್ನು ಮಾಡಿ ಎಂದು ಹೇಳುತ್ತೇನೆ.

ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸು, ಸೇಲ್ಸ್‌ಟ್ಯಾಕ್ಸು ಇದರೊಳಗೆಲ್ಲಾ ಆಕ್ಟಿನಲ್ಲೇ ಅಪೀಲ್ ಸೆಕ್ಷನ್ ಇದೆ. ಆದರೆ ಇದರೊಳಗೆ ಅಪೀಲ್ ಸೆಕ್ಷನ್ ಇಲ್ಲ.

ಸೆಕ್ಷನ್ 7ರಲ್ಲಿ It is a charge ಎಂದು ಹೇಳು ತ್ತೀರಿ. "Water rate and contribution cannot be a paramount charge on the land. It is only the right, title and

interest that is liable for sale and not the entire land. It is not a paramount charge as land revenue.

ಸೆಕ್ಷನ್ 10ರಲ್ಲಿ leavy of water rate ವಿಚಾರ ಹೇಳಿದ್ದೀರಿ. ಇಲ್ಲಿ ಎಷ್ಟು ರೇಟ್ ಇರಬೇಕು, 10ಸಾವಿರವೇ 20ಸಾವಿರವೇ ಎನ್ನುವುದು ಆಕ್ಟಿನಲ್ಲೇ ಬರಬೇಕು. ರೂಲ್ಸ್‌ನಲ್ಲಿ ಬರುತ್ತದೆ ಎಂದರೆ ಖಂಡಿತವಾಗಿ ನಾನು ಒಪ್ಪುವುದಿಲ್ಲ. ಪ್ರತಿಯೊಂದು ಆಕ್ಟ್‌ನಲ್ಲೂ ನಾನು ಹೇಳಿದ್ದು ಇದೆ. ಸೆಕ್ಷನ್ (10) ಕ್ಲಾಸ್ (2)ರಲ್ಲಿ.

> "For the avoidance of doubt, it is hereby declared that water rate leviable under this Act is not a tax on land but is a charge for the water supplied or used for the irrigation of lands."

ಎಂದು ಹೇಳಿದೆ. ಚಾರ್ಜು ಎಂದರೆ ಅದು ಪ್ಯಾರಮೌಂಟ್ ಚಾರ್ಜು ಆಗುತ್ತದೆಯೇ ?

It is only land revenue that is paramount charge and no other tax or any cess levied can be a paramount charge.

ಇದನ್ನು ತಾವು ನೋಡಬೇಕು. ರೂಲ್ಸ್‌ನಲ್ಲಿ ಮಾಡುತ್ತೇವೆ ಎಂದು ಹೇಳುತ್ತಾ ಇದ್ದೀರಿ. ಆಕ್ಟನ್ನು ಜಾರಿಗೆ ತರುವುದಕ್ಕೆ ಮುಂಚೆ ಇದನ್ನೆಲ್ಲಾ ಆಲೋಚನೆ ಮಾಡಿದರೆ ಒಳ್ಳೆಯದು, ಇದರಲ್ಲಿರುವ wordings ನೋಡಿ, "from any source" ಎಂದು ಇದೆ. ಈ ಡ್ರಾಫ್ಟ್ ಬಿಲ್ಲನ್ನು ನಿದ್ದೆಗಣ್ಣಿನಲ್ಲಿ ಮಾಡಿದ ಹಾಗಿದೆ. ರೈತರಿಗೆ ಅನಾನುಕೂಲವಾಗ ಬಾರದು. ಇದನ್ನು ಜಾರಿಗೆ ತರತಕ್ಕ ಅಧಿಕಾರಿಗಳಿಗೆ ಸುಲಭವಾಗಿರಬೇಕು. ಇದೇ ನನ್ನ ಉದ್ದೇಶ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ ವಾಟರ್‌ರೇಟ್ ಲೇವೀ ಮಾಡುವಾಗ ನಮಗೆಲ್ಲಾ ಅನುಭವ ಇದೆ. ಕೆರೆಯತೂಬಿನ ಹತ್ತಿರ ಇರತಕ್ಕ ಜಮೀನಿಗೆ $\frac{1}{4}$ ಭಾಗ, 1/8 ಭಾಗ ಎಂದು ನಿಯಮಿಸಿದ್ದರೂ ಕೂಡ ಹತ್ತಿರದಲ್ಲಿರುವ ಪ್ರದೇಶಕ್ಕೆ ಸದಾ ನೀರು ಸಿಕ್ಕುತ್ತದೆ, ಕೊನೆ ಭಾಗದಲ್ಲಿರತಕ್ಕ ಜಮೀನಿಗೆ ನೀರು ಸಿಕ್ಕುವುದಿಲ್ಲ. ಅವರಿಗೆ ರೆಮಿಷನ್ ಕೂಡ ಕೊಡುವುದಿಲ್ಲ. ಅವರಿಗೇನಾದರೂ ತೊಂದರೆ ಆಗಿದ್ದರೆ ಅವರನ್ನು ಕೇಳುವವರೇ ಇಲ್ಲ. ಆದ್ದರಿಂದ ಈ ವಾಟರ್ ರೇಟ್ ಹಾಕುವಾಗ ಹತ್ತಿರದಲ್ಲಿರತಕ್ಕ ಜಮೀನಿಗೆ ಜಾಸ್ತಿ ಹಾಕಿ, ದೂರದಲ್ಲಿರುವ ಜಮೀನಿಗೆ ಕಮ್ಮಿ ಹಾಕಿ, ಹಾಗಲ್ಲದೆ ಯೂನಿಫಾರಂ ರೇಟ್ ಹಾಕುತ್ತೇವೆ ಎಂದರೆ ಬಹಳ ತೊಂದರೆಯಾಗುತ್ತದೆ. ಕೆರೆ ಕಟ್ಟಬೇಕೆಂದರೆ ಕೆಲವು ಕಡೆ ಎರಡು ಗುಡ್ಡಕ್ಕೆ ಅಡ್ಡ ಹಾಕಿದರೆ ಆಯಿತು. ಅಲ್ಲಿ ಬಹಳ ಸುಲಭವಾಗಿ ಕೆರೆ ಆಗುತ್ತದೆ. ಇನ್ನು ಕೆಲವು ಕಡೆ ಖರ್ಚು ಬಹಳ ಜಾಸ್ತಿ ಆಗುತ್ತದೆ. ಆದ್ದರಿಂದ ಇದನ್ನೆಲ್ಲಾ ಗಮನಿಸಿ, ರೈತರ ಸ್ಥಿತಿಗತಿ ಹೇಗಿದೆ ಎಂಬುದನ್ನು ನೋಡಿಕೊಂಡು, ಸ್ಥಳ ವಿದ್ಯಮಾನದ ಮೇಲೆ ವಾಟರ್ ರೇಟ್ ಹಾಕಬೇಕಾದ್ದು ಸೂಕ್ತ. ಇದೂ ಕೂಡ ರೂಲ್ಸ್‌ನಲ್ಲಿ ಬರುತ್ತದೆ ಎಂದು ಹೇಳುತ್ತೀರಿ. ರೂಲ್ಸ್‌ನಲ್ಲಿ ಬಂದರೆ ಸಂತೋಷ.

ಸೆಕ್ಷನ್ (4), ಪ್ರೊವಿಸೋನಲ್ಲಿ It will not be more than 500 Rupees ಎಂದು ಹೇಳಿದ್ದೀರಿ. ಇದು ಅರ್ಥವಾಗಲಿಲ್ಲ. ಒಬ್ಬ ಮನುಷ್ಯನಿಗೆ 10ಎಕರೆ ಇರಬಹುದು 20 ಎಕರೆ ಇರಬಹುದು. ಇದು ambiguous ಆಗಿದೆ ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ. ಕೆರೆಗಳಿಂದ ಜೋಪಿನ ನೀರು ಬರುತ್ತದೆ. ಮೇಲಿನ ಪ್ರದೇಶದಲ್ಲಿರತಕ್ಕ ಒಳ್ಳೆ ಜಮೀನಿಗೂ ಒಂದೇರೇಟು, ಜೋಪಿನ ನೀರು ಬರುವ ಪ್ರದೇಶಕ್ಕೂ ಒಂದೇರೇಟು ಹಾಕುತ್ತೀರಿ. ಇದು appressive taxation ಆಗುತ್ತದೆ. ಆ ರೀತಿ ಆಗದಂತೆ ನೋಡಿಕೊಳ್ಳಬೇಕು. ಕೆರೆಗಳಲ್ಲಿ ಸರ್ಕಾರದವರು ಪೇಶುವಾರು ಹರಾಜುಮಾಡುತ್ತಾರೆ. ಆದ್ದರಿಂದ ಅವುಗಳನ್ನು ದುರಸ್ತು ಮಾಡಬೇಕಾದ್ದು ಅವರ ಕರ್ತವ್ಯ ಎಂದು ಹೇಳಿದರು, cost of the amount incurred for the repairsಈ ಬಗ್ಗೆ ರೈತರು ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ ಎಂದು ಹೇಳುತ್ತೀರಿ, ಈಗ ಅಂತೂ ಅನೇಕ ಕೆರೆಗಳು ದುರಸ್ತಾಗದೇ ಬಹಳ ಕೆಟ್ಟು ಹೋಗುತ್ತಿವೆ ಆದ್ದರಿಂದ ಪ್ರತಿಯೊಂದು ಕೆರೆಯ ದುರಸ್ತು ದೊಡ್ಡದಾಗಲೀ, ಚಿಕ್ಕದಾಗಲೀ, ಸರ್ಕಾರದವರೇ ತೆಗೆದು ಕೊಳ್ಳಬೇಕು. ತುಮಕೂರು ತಾಲ್ಲೂಕಿಲ್ಲಿ ಕುಂಕುಮನ ಹಳ್ಳಿ ಅಂತ ಇದೆ. ತಗ್ಗು ಪ್ರದೇಶದಲ್ಲಿ ಬತ್ತ ಬೆಳೆದಿದ್ದಾರೆ. ಮಳೆ ನೀರಿನಿಂದ ಬೆಳೆದದ್ದು ಅದು. ಅದಕ್ಕೂ ವಾಟರ್ ರೇಟ್ ಹಾಕಿದ್ದಾರೆ. ಇದು ಯಾವ ನ್ಯಾಯ, ಯಾವ ಧರ್ಮ ಸ್ವಾಮಿ ? ಇದರಲ್ಲಿ ಏನಾದರೂ ಒಂದು ನೀತಿ ಇದೆಯೇ ? ಆಫೀಸರು ತಮ್ಮ ಇಷ್ಟಾನುಸಾರ ಮಾಡಿದ್ದಾರೆ. ಇರಿಗೇಷನ್ ಆಕ್ಟ್ ಜಾರಿಗೆ ಬಂದು 4-5 ವರ್ಷ ಆಗಿದೆ. ಇನ್ನೂ ರೂಲ್ಸ್ ಆಗಿಲ್ಲ. ಹೀಗಾದರೆ ಹೇಗೆ ? ಮುಂದೆ ರೈತರಿಗೆ ಎಷ್ಟು ತೊಂದರೆ ಯಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲ. ಇದನ್ನು ಮರೆತ ಹಾಗಿದೆ, ಈ ರೀತಿ ಅಧಿಕಾರಿಗಳು ಇಷ್ಟಾನುಸಾರ ಕೆಲಸ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಬೆಟರ್‌ಮೆಂಟ್ ಟ್ಯಾಕ್ಸ್ ಹಾಕಬೇಡಿ ಎಂದು ನಾನು ಹೇಳುವುದಿಲ್ಲ. ಇರಿಗೇಷನ್ ಬಿಲ್ ತರಬೇಡಿ ಎಂದು ಹೇಳುವುದಿಲ್ಲ. ಆದರೆ ರೈತರಿಗೆ ತೊಂದರೆ ಇಲ್ಲದ ಹಾಗೆ, ಅಧಿಕಾರಗಳಿಗೆ ಸುಲಭವಾಗಿ ಕೆಲಸಕಾರ್ಯಗಳನ್ನು ನಡೆಸುವುದಕ್ಕೆ ಅನುಕೂಲವಾಗುವಂತೆ, ಮತ್ತು ಅವರಿಗೆ ಅಧಿಕ ಪ್ರಸಂಗತನಕ್ಕೆ ಅವಕಾಶವಿಲ್ಲದಂತೆ ತಕ್ಕ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

[Sri N. O. Samaji spoke in Marathi. His speech is printed in the Appendix number to this Volume].

ಶ್ರೀ ಎಚ್. ಎಂ. ಚನ್ನಬಸಪ್ಪ (ಕೃಷ್ಣರಾಜನಗರ).—ಸ್ವಾಮಿ, ಈ ಮಸೂದೆ ನಮ್ಮ ಸಂಸ್ಥಾನಕ್ಕೆ ಹೊಸದೇನೂ ಅಲ್ಲ. ಇದು ಹೈದರಾಬಾದಿನಲ್ಲಿದೆ, ಬೊಂಬಾಯಿನಲ್ಲಿದೆ, ಮದರಾಸಿನಲ್ಲಿದೆ. ವಾಟರ್ ರೇಟ್ ಮತ್ತು ಕಂಟ್ರಿಬ್ಯೂಷನ್ ವಿಧಿಸತಕ್ಕ ಕಾನೂನು ಹಳೆಯ ಮೈಸೂರಿನಲ್ಲಿದೆ, ಇವಿಷ್ಟನ್ನೂ ಸಮನ್ವಯ ಮಾಡಿ ಐದು ಭಾಗಗಳಿಗೂ ಕೂಡ ಅನ್ವಯಿಸುವಂಥ ಒಂದು ಶಾಸನವನ್ನು ಮಾಡಬೇಕೆಂಬುದೇ ಇದರ ಉದ್ದೇಶ. ಈ ಐದು ಭಾಗಗಳಿಗೂ ಸಮನ್ವಯವಾಗುವಂಥ irrigation ಕಾನೂನು ಇಲ್ಲ. ಅದನ್ನೂ ತರಬೇಕೆಂಬ ಉದ್ದೇಶವಿದೆ. ಅದರ ಅಂಗವಾಗಿ ಈ ಮಸೂದೆಯನ್ನು ತಂದಿದ್ದಾರೆಂದು ಸರ್ಕಾರದವರು objects and reasonsನಲ್ಲಿ ಹೇಳಿದ್ದಾರೆ. ಬಹುಶಃ common irrigation law ಅದರಲ್ಲಿ ಮಾಡಿದ್ದರೆ ಚೆನ್ನಾಗಿತ್ತು ಎಂದನ್ನಿಸುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದರ ಅಂಗವಾಗಿ ಎಂದು ಹೇಳಿಲ್ಲ. It is an independent one. ಅಂಗವಾಗಿ ಅಲ್ಲ.

Sri H. M. CHANNABASAPPA.—My suggestion is that they should form part and parcel of the Irrigation Act itself. I give a suggestion to the Government. ಕಂಟ್ರಿಬ್ಯೂಷನ್ ಕೊಡತಕ್ಕದ್ದು ಮತ್ತೆ water rate levy ಮಾಡತಕ್ಕದ್ದು ಇವುಗಳ ಬಗ್ಗೆ ಈ ಮಸೂಧೆಯಲ್ಲಿ ಸಾರ್ವತ್ರಿಕವಾಗಿ ಒಂದು ಅಂದಾಜು ಕೊಟ್ಟಿದ್ದಾರೆಯೇ ವಿನಾ ಬಾಕಿ ವಿವರಗಳು ಯಾವ ರೀತಿ ನಡೆಯಬೇಕು ಎನ್ನುವುದನ್ನೆಲ್ಲ ರೂಲ್ಸ್‌ನಲ್ಲಿ prescribe ಮಾಡತಕ್ಕದ್ದೆಂದು ಸೂಚನೆ ಕೊಟ್ಟಿರುತ್ತಾರೆ. ಇದರಲ್ಲಿ ಮಲೆನಾಡು ಪ್ರದೇಶದಲ್ಲಿ ತಕ್ಕ irrigation projects, ಮೈದಾನ ಪ್ರದೇಶದಲ್ಲಿರತಕ್ಕವು ಮತ್ತು ಅಭಾವಪ್ರದೇಶದಲ್ಲಿರತಕ್ಕವು ಇವುಗಳಿಗೆಲ್ಲಕ್ಕೂ ಕೂಡ ಒಂದೇ ರೀತಿಯಾಗಿ ಕಾಂಟ್ರಿಬ್ಯೂಷನ್ ನಿಗದಿ ಮಾಡುವುದಕ್ಕಾಗುವುದಿಲ್ಲ. ಅದೇರೀತಿಯಾಗಿ water rate ಕೂಡ ಎಲ್ಲಕ್ಕೂ ಒಂದೇರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಇದರ ಜೊತೆಗೆ

11 A.M.

ಮೈನರ್ ನೀರಾವರಿ ಕೆಲಸಗಳಿವೆ, ಮೇಜರ್ ನೀರಾವರಿ, improvement and restoration ಕೆಲಸಗಳಿವೆ. ಇವುಗಳಿಗೂ ಒಂದೇ ರೀತಿ ಮಾಡುವುದಕ್ಕಾಗುವುದಿಲ್ಲ. ಇವುಗಳನ್ನು ಪ್ರದೇಶ, ಸ್ಥಳ ಸನ್ನಿವೇಶಗಳಿಗನುಗುಣವಾಗಿ, ಯೋಜನೆಗನುಗುಣವಾಗಿ ಬೆಳೆಗನುಗುಣವಾಗಿ ವಿಧಾಯಕ ಮಾಡಬೇಕಾಗಿ ಬರುತ್ತದೆ. ನಮ್ಮ ಮಸೂದಾ ಕಾನೂನಿನಲ್ಲಿ ಯಾವ ರೀತಿ ಈ ಉದ್ದೇಶಗಳನ್ನು ಸಾಧನೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆಂದು ನೋಡಿದೆ. ಇದರಲ್ಲಿ ಬಹುಃ ಹೈದರಾಬಾದು, ಬೊಂಬಾಯಿ ಸಂಸ್ಥಾನಗಳಲ್ಲಿದ್ದ ಕಾನೂನುಗಳಿಗಿಂತ ಹೆಚ್ಚು ವ್ಯತ್ಯಾಸ ವೆದ್ದಂತೇನೂ ಕಾಣಬರುವುದಿಲ್ಲ. ಮುಖ್ಯವಾಗಿ ಕಾಂಟ್ರಿಬ್ಯೂಷನ್ maximum ಇರಬೇಕೆ minimum ಇರಬೇಕೇ ಎನ್ನುವುದು ಮೂಲ ತತ್ವ. ಕಾಂಟ್ರಿಬ್ಯೂಷನ್ 500ರೂಪಾಯಿಗೆ ಮೀರಿರಬಾರದೆಂದು ಹೇಳಿದ್ದಾರೆ. ಎಕರೆಗೆ ಎಂದು ಸೇರಿಸಬೇಕು. draftingನಲ್ಲಿ ತಪ್ಪಿದೆ ಎಂದು ಕಾಣುತ್ತದೆ. Maximum and minimumಇರಬೇಕೆ, ಇರಬೇಕಾದರೆ ಎಷ್ಟಿರಬೇಕು, ವಾಟರ್ ರೇಟ್‌ನಲ್ಲಿಯೂ maximum and minimum.ಇರಬೇಕೆ, ಹಾಗಿರಬೇಕಾದರೆ ಎಷ್ಟಿರಬೇಕು ಎನ್ನುವ ಸೂಚನೆ ಇದರಲ್ಲಿಲ್ಲ. ಇರಿಗೇಷನ್ ಆಕ್ಟ್ ಪ್ರಕಾರ ಸಾವಿರ ರೂಪಾಯಿ ಅಂದಾಜಿರ ತಕ್ಕದ್ದಕ್ಕೆ ಹಾಕಬೇಕೆ ಎನ್ನುವುದೂ ಇಲ್ಲ. ಮಿನಿಮಮ್ ಇಷ್ಟೆಂದು ಇಲ್ಲ. 1954ನೆಯ ಇಸವಿಯಲ್ಲಿ ಡಾ॥ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೆವು. ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್ ಯಾವ ರೀತಿ ನಿಗದಿ ಮಾಡಬೇಕೆಂಬ ಬಗ್ಗೆ ಆ ಸಮಿತಿಯು ಸಲಹೆಯನ್ನು ಕೇಳಿದ್ದೆವು. ಅವರವರದಿ ಸರ್ಕಾರದ ಮುಂದಿದೆ; ಅದರಲ್ಲಿ ಅನೇಕ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನಂಗೀಕಾರ ಮಾಡಿ ಇದರಲ್ಲಿ ಸೇರಿಸಿದ್ದಾರೆಯೆ ಎಂದು ನೋಡಿದೆ. ಅವರ ಸಲಹೆಗಳಲ್ಲಿ ಸಾರ್ವಜನಿಕರಿಗೂ ಸರ್ಕಾರಕ್ಕೂ ಉಪಯುಕ್ತವಾದವುಗಳಿವೆ, ಅವನ್ನೂ ಈ ಮಸೂದೆಯಲ್ಲಿ ಸೇರಿಸಿಲ್ಲ. ಆದುದರಿಂದ ಸೆಲೆಕ್ಟ್ ಕಮಿಟಿಯವರು ಆ ಸಲಹೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಪರಿಶೀಲನೆ ಮಾಡಬೇಕು. ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಪದ್ಧತಿಯನ್ನು ಇಡೀ ಭರತ ಖಂಡದಲ್ಲಿ ಇನ್ನೆಲ್ಲಿಯೂ ಯೋಚನೆ ಮಾಡದೇಯಿರುವ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಅನುಷ್ಠಾನಕ್ಕೆ ತಂದಿದ್ದರು. ಇಲ್ಲಿ ಇದು 1888ರಲ್ಲೇ ಜಾರಿಗೆ ಬಂತು. ಹಳೆಯ ಮೈಸೂರಿನಲ್ಲಿ ಪ್ರಗತಿದಾಯಕವಾದ ಈ ನೀತಿಯನ್ನನುಸರಿಸಿಕೊಂಡು ಬಂದಿದ್ದಾರೆ. 1916ರಲ್ಲಿ ಹಿಂದಿನ ಮೈನರ್ ಟ್ಯಾಂಕ್ ರೆಗ್ಯೂಲೇಷನ್ ಇದ್ದುದರಲ್ಲಿ ಏನೇನು ಅನುಕೂಲತೆಗಳನ್ನು ಕೊಟ್ಟಿದ್ದೆವೋ ಅವನ್ನು ಸ್ವಲ್ಪ ಬದಲಾವಣೆ ಮಾಡಿ ಉತ್ತಮ ರೀತಿಯ ಅನುಕೂಲಗಳನ್ನು ಮಾಡಿಕೊಟ್ಟೆವು. ಆಗ ಮೂರನೆಯ ಎರಡು ಭಾಗದಷ್ಟು ರೈತರು ಒಪ್ಪಿಕೊಂಡರೆ ಆ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದೆವು, ಇಲ್ಲದಿದ್ದರೆ ಇಲ್ಲ. ಇದು 1941ರಲ್ಲಿ ಪುನಃ ವಾರ್ಪಾಡಾಗಿ ನಾಲ್ಕನೆಯ ಒಂದು ಭಾಗ ರೈತರು ಕಾಂಟ್ರಿಬ್ಯೂಷನ್ ಕೊಡಬೇಕೆಂದು ವಿಧಾಯಕವಾಯಿತು. 1948ರಲ್ಲಿ ಪುನಃ ತಿದ್ದುಪಡಿಯಾಗಿ ಅದು ಐದನೆಯ ಒಂದು ಭಾಗವೆಂದಾಯಿತು. 1952ರಲ್ಲಿ ಅದು ರಿಪೀಲ್ ಆಗಿ ಇರಿಗೇಷನ್ ಆಕ್ಟ್ ತಿದ್ದುಪಡಿ ಮಾಡಿದೆವು. ಅದರ ಪ್ರಕಾರ ಮೈನರ್ ಕೆರೆಗಳಿಗೆ 200ರೂಪಾಯಿ ಮೇಲೆ ಇರಬಾರದೆಂದು ವಿಧಾಯಕ ಮಾಡಿದೆವು. ಒಟ್ಟು ಖರ್ಚಾಗುವುದರಲ್ಲಿ ಎಷ್ಟುಭಾಗ ಕೊಡಬೇಕೆಂದು ನಿಗದಿ ಮಾಡಲಿಲ್ಲ. ಇದರ ಮೇಲೆ ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್ ಈ ಒಂದು ನಿಯಮಕ್ಕೊಳಪಟ್ಟು ಸರ್ಕಾರ ವಿಧಾಯಕ ಮಾಡಬೇಕೆಂದು ವ್ಯವಸ್ಥೆಯಾಯಿತು. ಇದರಲ್ಲಿ ಹಲವು ಬದಲಾವಣೆಗಳನ್ನು ಸೂಚನೆ ಮಾಡಬೇಕೆಂದು ನನ್ನ ಅಭಿಪ್ರಾಯ. ಈ ಮಸೂದೆಯ 3ನೆಯ ಕ್ಲಾಜಿನಲ್ಲಿ ಸರ್ಕಾರ ಒಂದು ಅಧಿಕಾರವನ್ನು ತೆಗೆದುಕೊಂಡಿದೆ. Construction, restoration, expansion or alteration ಈ ನಾಲ್ಕು ಅನುಕೂಲ ಮಾಡಿದರೆ, ರೈತರು ಕೊಡಬೇಕಾದ ಕಾಂಟ್ರಿಬ್ಯೂಷನ್ ವಿಧಾಯಕ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಇದರಲ್ಲಿ ಒಂದು ಲೋಪ ವಿದೆ. "The Government shall be entiled to levy a beetrment contribution' in accordance with the provisions of this Act, from the land-holder or holder of any land which in its opinion......" ಎಂದಿದೆ. ಇದರ ಮುಂದೆ "is benefited by the construction of the works" ಎಂದಿರಬೇಕು. ಇಲ್ಲದಿದ್ದರೆ ಅರ್ಥವಾಗುವುದಿಲ್ಲ. ಈ ಲೋಪವನ್ನು ಸರ್ಕಾರದವರು ಆಗಲೇ ಮನಗಂಡಿದ್ದಾರೆಂದು ಕಾಣುತ್ತದೆ. ಮೈಸೂರಿನಲ್ಲಿ 1944ನೆಯ ಇಸವಿಯಿಂದೀಚೆಗೆ ಆಗಿರುವ ನೀರಾವರಿ ಯೋಜನೆ ಗಳಿಗೆ ಮಾತ್ರ ಇದು ಅನ್ವಯವಾಗುತ್ತದೆಂದು ಸೂಚನೆ ಮಾಡಲಾಗಿದೆ. ನೆನ್ನೆಯ ದಿವಸ ಮಾನ್ಯ ಒಬ್ಬ ಸದಸ್ಯರು ಈ ಹಿಂದೆ ಒಂದು ಒಪ್ಪಂದ ವಾಗಿದ್ದರೆ ಅದನ್ನು ಈ ಶಾಸನದಿಂದ revoke ಮಾಡಬಹುದೆ ಎಂಬುದನ್ನು ಯೋಚನೆ ಮಾಡಬೇಕೆಂದು ಸೂಚಿಸಿದ್ದರು. ನುಗು, ಭದ್ರ, ತುಂಗ, ಅಂಬ್ಲಿಗೊಲ, ಇವೆಲ್ಲವೂ 1944ರಿಂದೀಚೆಗೆ ಆದವು ಹಿಂದಿದ್ದ ಶಾಸನಕ್ಕನುಗುಣವಾಗಿ ಇಷ್ಟಿಷ್ಟು ಕಾಂಟ್ರಿಬ್ಯೂಷನ್ ಕೊಡಬೇಕೆಂದು ಗೊತ್ತು ಮಾಡಿದ್ದಾರೆ. ರೈತರು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ,

ಅದನ್ನು ಸರ್ಕಾರ ಒಪ್ಪಿದೆ ಅದಕ್ಕನುಗುಣವಾಗಿ ಈ ಯೋಜನೆಗಳನ್ನು ಕೈಗೊಳ್ಳಲಾಗಿದೆ 1944ನೆಯ ಇಸವಿಯಿಂದೀಚೆಗೆ ಪ್ರಾರಂಭವಾಗಿರುವ ಎಷ್ಟೋ ಯೋಜನೆಗಳಿವೆ. . . .

ಶ್ರೀ ಎಚ್. ಕೆ. ವೀರಣ್ಣಗೌಡ.—1944ನೆಯ ಇಸವಿಯಿಂದೀಚೆಗೆ ಕೆಲವನ್ನು ತೆಗೆದುಕೊಂಡಿದೆ, ಕೆಲವನ್ನು ತೆಗೆದುಕೊಂಡಿಲ್ಲ. ಇರಿಗೇಷನ್ ಎನ್‌ಕ್ವೈರಿ ಮಾಡದೆ ಕೆಲವನ್ನು ತೆಗೆದುಕೊಂಡಿರುವುದು ತಮಗೇ ಗೊತ್ತಿದೆ. ಹೀಗಿರುವಾಗ ಒಪ್ಪಂದವಾಗಿರುವುದನ್ನು 'ರಿವೋಕ್' ಮಾಡುವುದು ಎಂದರೆ ಅರ್ಥವಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವೇಳೆ ಆಗದೇಯಿದ್ದರೆ ಅವಕ್ಕೆ ಮಾಡುವುದಿಲ್ಲವೆಂದು ಸ್ಪಷ್ಟಪಡಿಸಬೇಕು. 1944ರಿಂದೀಚೆಗೆ ಎಂದಮೇಲೆ ಆಗಿರುವುದು, ಆಗದೇಯಿರುವುದು ಎಲ್ಲವೂ ಸೇರುತ್ತದೆ. ಮುಚ್ಚಳಿಕೆಯಾಗಿ ಒಪ್ಪಂದಕ್ಕೆ ಬಂದಿದ್ದರೆ ಅದಕ್ಕೆ ಅನ್ವಯಿಸುವುದಿಲ್ಲವೆಂದು ಸ್ಪಷ್ಟಪಡಿಸಬೇಕು.

ಇನ್ನು 'ಬೆಟರ್‌ಮೆಂಟ್‌ಲೆವಿ' ಎಷ್ಟು ಹಾಕಬೇಕೆಂಬ ವಿಷಯ. ಪೂರ್ವದಲ್ಲಿ ಇರಿಗೇಷನ್ ಆಕ್ಟ್ ಪ್ರಕಾರ ಇದನ್ನು ನಿರ್ದಿಷ್ಟವಾಗಿ ವಿಧಾಯಕ ಮಾಡಿರಲಿಲ್ಲ. ಸಮಯ ಸನ್ನಿವೇಶಗಳನ್ನನುಸರಿಸಿ ಹಾಕುತ್ತಿದ್ದೆವು. ಎಕರೆಗೆ 500ರೂಪಾಯಿಗಳ ಮೇಲೆ ಇರಬಾರದೆಂದು ವಿಧಾಯಕ ಮಾಡಿದ್ದೆವು. ಇಷ್ಟು ಹಾಕಬಹುದೆಂದು ಗೊತ್ತು ಮಾಡುವವರು ಕಲೆಕ್ಟರು ಅಥವ ಡೆಪ್ಯುಟಿ ಕಮಿಷನರು. ಒಂದು ವಿಧಾಯಕ ರೀತಿಯಲ್ಲಿ objections call for ಮಾಡಿ ತೀರ್ಮಾನ ಮಾಡಬೇಕೆಂದಿತ್ತು. ಇದರಲ್ಲಿ ಯಾರಿಗಾದರೂ ಭಿನ್ನಾಭಿಪ್ರಾಯವಿದ್ದಲ್ಲಿ ವಿಧಾಯಕ ಮಾಡಲ್ಪಟ್ಟ ಅಧಿಕಾರಿಗಳಲ್ಲಿ ಅಪೀಲು ಹಾಕಿ, ಅವರು ತೀರ್ಮಾನ ಮಾಡಬೇಕು. ಈಗಾಗಲೇ 500ರೂಪಾಯಿನ ಮೇಲೆ ಹಾಕಬಾರದೆಂದು ಏನಿದೆಯೋ ಅದನ್ನು ಇಟ್ಟುಕೊಳ್ಳೋಣ. ಈಗ minimumಗೊತ್ತು ಮಾಡಬೇಕು. ಡಾ॥ ನಾಗನಗೌಡ ಸಮಿತಿಯವರು 2,500ರೂಪಾಯಿಗಳಿಗೆ ಕಡಮೆ ಅಂದಾಜಾಗುವ ಕೆರೆಗಳಿಗೆ ಯಾವ ಕಾಂಟ್ರಿಬ್ಯೂಷನ್ ಹಾಕುವುದೂ ಸರಿಯಲ್ಲವೆಂದು ಸಲಹೆ ಮಾಡಿದ್ದಾರೆ. ಆ ಸಲಹೆಯನ್ನು ನಾವು ಅಂಗೀಕಾರ ಮಾಡಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ನಾಗನಗೌಡರ ಸಮಿತಿಯ ವರದಿಯ ವಿಚಾರದಲ್ಲಿ ಸರ್ಕಾರದವರು ತೀರ್ಮಾನ ಮಾಡಿದ್ದಾರೆ, ಅದನ್ನು ಬದಲಾಯಿಸುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದರೂ ಕೂಡ ಈ ಹೊತ್ತು ಸಮಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು ಏಕೆ ಬದಲಾವಣೆ ಮಾಡಬಾರದು? 2,500ರೂಪಾಯಿನೊಳಗಿದ್ದರೆ ಕಾಂಟ್ರಿಬ್ಯೂಷನ್ ಹಾಕುವುದು ಅಷ್ಟು ಸೂಕ್ತವಲ್ಲವೆಂದು ನಾನು ಸಲಹೆ ಮಾಡಿ ಸೆಲೆಕ್ಟ್ ಕಮಿಟಿಯ ಪರಿಶೀಲನೆಗೆ ಬಿಡುತ್ತೇನೆ. ಇನ್ನು ಎಕರೆಗೆ 500ರೂಪಾಯಿನೊಳಗೆ ಗೊತ್ತು ಮಾಡಬಹುದೆಂದು ಕಲೆಕ್ಟರಿಗೆ ಅಧಿಕಾರ ಕೊಟ್ಟಿದೆ, ಅವರು ಎಷ್ಟು ಬೇಕಾದರೂ ಹಾಕಬಹುದು. ನಾನು ಹೇಳುವುದೇನೆಂದರೆ, ನಾವು ಕಾಮಗಾರಿಗಳಿಗೆ ಎಷ್ಟು ಹಣ ಖರ್ಚು ಮಾಡುತ್ತೇವೋ ಅದರ ನಿರ್ದಿಷ್ಟ ಭಾಗವನ್ನು, ಎಂದರೆ 1/3 ಭಾಗ, 1/4 ಭಾಗ, 1/5 ಅಥವ 1/6ಭಾಗ ಹೀಗೆ ಯಾವ ಯಾವ ಪ್ರದೇಶಗಳಲ್ಲಿ ಕಾಮಗಾರಿಗಳಿಗೆಷ್ಟು ಖರ್ಚಾಗುತ್ತದೆಂಬುದನ್ನು ಗಮನಿಸಿ, ವಿಧಾಯಕ ಮಾಡಬೇಕು. ಮಲೆನಾಡಿನಲ್ಲಿ ಧಾರಾಕಾರವಾಗಿ ಮಳೆಯ ನೀರು ಬರುವುದರಿಂದ ಸಣ್ಣಪುಟ್ಟ ಕೆರೆಗಳಿಗೆ ಕಡಮೆ ಖರ್ಚಾಗುತ್ತದೆ, ಇವಕ್ಕೆ ನಿರ್ದಿಷ್ಟವಾಗಿ ಗೊತ್ತು ಮಾಡದೇಯಿದ್ದರೆ ಅಧಿಕಾರಿಗಳು ಬೇಕಾದಷ್ಟು ಕಾಂಟ್ರಿಬ್ಯೂಷನ್ ಹಾಕುವುದಕ್ಕೆ ಅಧಿಕಾರ ವಿರುತ್ತದೆ. ಮತ್ತೆ ಪ್ರಾಜೆಕ್ಟಿನಿಂದ ಪ್ರಾಜಕ್ಟಿಗೆ ಬದಲಾವಣೆಯಾಗುತ್ತದೆ. ಆದಕ್ಕೋಸ್ಕರ ಇಷ್ಟು ಸಾವಿರ ಕಡಮೆ ಇರುವುದಕ್ಕೆ ಇಷ್ಟು ತೆರಿಗೆ, ಅದಕ್ಕೆ ಮೇಲ್ಪಟ್ಟು ಇರುವುದಕ್ಕೆ ಇಷ್ಟು ತೆರಿಗೆ ಎಂದು ಸ್ಲ್ಯಾಬ್ ರೇಟನ್ನು ವಿಧಿಸಬೇಕು. ನೀರಾವರಿ ಕಾಮಗಾರಿಗಳನ್ನು ಪ್ರಾರಂಭ ಮಾಡುವುದರಿಂದ ಜನಗಳಿಗೆ ಎಷ್ಟು ಅನುಕೂಲವಾಗುತ್ತದೆ ಎಂಬುದನ್ನು ದೃಷ್ಟಿಗೆ ತೆಗೆದುಕೊಂಡು ಮಾಡಬೇಕು. ಒಬ್ಬ ಮನುಷ್ಯನು ನೇರವಾಗಿ ಕಾಲುವೆಯಿಂದ ನೀರನ್ನು ತೆಗೆದುಕೊಂಡರೆ ಅದಕ್ಕೆ ವಾಟರ್ ರೇಟ್ ಕಂಟ್ರಿಬ್ಯೂಷನ್ ಹಾಕಬೇಕು ಎಂದು ಹೇಳಿದ್ದಾರೆ. ಇನ್‌ಡೈರೆಕ್ಟಾಗಿ ನೀರು ಸರಬರಾಯಿ ಇರುತ್ತದೆ. ನೇರವಾಗಿ ನೀರನ್ನು ತೆಗೆದುಕೊಂಡರೆ ಆಗ ಕಂಟ್ರಿಬ್ಯೂಷನ್ ಇರತಕ್ಕದ್ದು. ಆದ್ದರಿಂದ ಆಯಾ ಸ್ಥಿತಿಗಳಿಗನುಗುಣವಾಗಿ ಈ ವಾಟರ್ ರೇಟನ್ನು ಹಾಕುವುದು ಸರಿಯೋ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವ ಅವಶ್ಯಕತೆ ಇದೆ. ಈಗ ಪ್ರಿಸ್ಕ್ರೈಬ್ಡ್ ಅಥಾರಿಟಿ ಎಂಬುದಾಗಿ ಹೇಳಿದ್ದಾರೆ. (4) sub-clause (iii)ರಲ್ಲಿ ಸರ್ಕಾರವೇ ಅಧಿಕಾರ ಇಟ್ಟುಕೊಳ್ಳಬೇಕು ಎಂದು ನನ್ನ ಸಲಹೆ. ಇದು ಮುಖ್ಯವಾದ ವಿಚಾರ. ರೈತರು ಒಪ್ಪಿಗೆ ಕೊಡಲಿ, ಕೊಡದಿರಲಿ, ಈ ಒಂದು ಅಧಿಕಾರವನ್ನಿಟ್ಟುಕೊಳ್ಳಲೇಬೇಕು, ಒಂದು ಪ್ರಾಜೆಕ್ಟನ್ನು ತೆಗೆದುಕೊಳ್ಳುವಾಗ ಇರ್ರಿಗೇಷನ್ ಕಾನೂನು ಪ್ರಕಾರ ಅಸಿಸ್ಟೆಂಟ್ ಇಂಜನಿಯರ್ ಆಗಿರುವವರು ಇರ್ರಿಗೇಷನ್ ಎನ್‌ಕ್ವೈರಿ ಮಾಡಬೇಕು. ಸೆಕ್ಷನ್ 27ರಲ್ಲಿ ಈ ಅಂಶವನ್ನು ಹಿಂದೆ ಪ್ರೊವೈಡ್ ಮಾಡಿದ್ದರು. ಈಗ ಅದನ್ನು ತೆಗೆದುಹಾಕಿದ್ದಾರೆ. ಇದರಿಂದ ರೈತನಿಗೆ ತೊಂದರೆಯಾಗುತ್ತದೆ. ಅವರ ಅಬ್‌ಜಕ್ಷನ್ ಏನಿದೆಯೋ ಅದನ್ನು ಸರ್ಕಾರದ ಗಮನಕ್ಕೆ ತರಬೇಕಾದರೆ ಬಹಳ ಕಷ್ಟ. ಸೆಕ್ಷನ್ 25, 26, 27ರಲ್ಲಿ ಇಂಜನಿಯರ್ ಆಗಿರತಕ್ಕವರು ಸ್ಥಳದಿಂದ ಸ್ಥಳಕ್ಕೆ ಹೋಗಿ ಅವರ ಕಷ್ಟಸುಖಗಳೇನಿವೆಯೆಂಬುದನ್ನು ಪರಿಶೀಲನೆ ಮಾಡಬೇಕು. ಈ ಬಗ್ಗೆ ಯಾವ ರೀತಿಯಿಂದಾದರೂ ಒಂದು ಪ್ರಾವಿಷನ್ ಮಾಡುವುದು ರೈತರ ಹಿತದೃಷ್ಟಿಯಿಂದ ಅವಶ್ಯಕ. ರೈತರು ಬೇಡವೆಂದು ಹೇಳಿದರೂ ಪ್ರಾಜೆಕ್ಟನ್ನು ತೆಗೆದುಕೊಳ್ಳುವ ಅಧಿಕಾರವನ್ನು ಇಟ್ಟುಕೊಳ್ಳಬಹುದು. ಆದರೆ ಅವರ ಸಲಹೆಗಳನ್ನು ತೆಗೆದುಕೊಳ್ಳುವ ವಿಚಾರವನ್ನು ತಾವು ಗೆಜೆಟ್ಟಿನಲ್ಲಿ ನೋಟಿಫೈ ಮಾಡಿದರೆ ಸಾಲದು. ಅವುಗಳನ್ನು ಶಾಸನದಲ್ಲಿ ಪ್ರೊವೈಡ್ ಮಾಡಬೇಕು. ಹಿಂದೆ ಇರ್ರಿಗೇಷನ್ ಆಕ್ಟಿನಲ್ಲಿ ಪ್ರೊವೈಡ್ ಮಾಡಿದ್ದ ಹಾಗೆ ಇರ್ರಿಗೇಷನ್ ಆಫೀಸರು ಎನ್‌ಕ್ವೈರಿ ಮಾಡುವುದನ್ನು ಏರ್ಪಾಡು ಮಾಡಬೇಕೆಂದು ನನ್ನ ಸಲಹೆ. ಇನ್ನು ಕಂಟ್ರಿಬ್ಯೂಷನ್ ಯಾವತ್ತಿನಿಂದ ಕೊಡಬೇಕು ಎನ್ನುವ ವಿಚಾರ. ನೀರನ್ನು ಒದಗಿಸಿದ ಮೇಲೆ ಭೂಮಿಯಲ್ಲಿ ಬೆಳೆ ಬೆಳೆಯಬೇಕಾದರೆ 1—1½ ವರ್ಷಗಳು ಬೇಕಾಗುತ್ತದೆ. ಯಾವತ್ತು ನೀರನ್ನು ಒದಗಿಸುತ್ತೀರೋ ಅಲ್ಲಿಂದ ಒಂದು ವರ್ಷದಿಂದಾಚೆಗೆ ಕಂಟ್ರಿಬ್ಯೂಷನ್ ತೆಗೆದುಕೊಳ್ಳಬೇಕೆಂದು ಸೂಚನೆ ಕೊಡಬೇಕು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಶಾಖೆಯ ಮಂತ್ರಿಗಳು).—ಕಾಂಟ್ರಿಬ್ಯೂಷನ್ ಕೊಡುವ ಕ್ರಮ 20 ವರ್ಷಗಳಿಂದಲೂ ಇದೆ, ತಾವು ಹೇಳುತ್ತಾ

(ಶ್ರೀ ಟಿ. ಮರಿಯಪ್ಪ)

ಇರುವುದು ಕಾಂಟ್ರಿಬ್ಯೂಷನ್‌ಗೋ ಅಥವಾ ವಾಟರ್ ರೇಟಿಗೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಂಟ್ರಿಬ್ಯೂಷನ್ನಿಗೆ ಜಮೀನು ಮುಟ್ಟು ಮಾಡಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕು. ಇನ್ನು ಲ್ಯಾಂಡ್ ಸರೆಂಡರ್ ಮಾಡುವುದರಲ್ಲಿ ಬಹಳ ಕಷ್ಟವಿದೆ. ಈ ಪದ್ಧತಿಯನ್ನು ಬಿಡಬೇಕು. ಜಮೀನು ಕೊಡುತ್ತೇವೆಂದು ಬಂದಾಗ ಅದನ್ನು ವ್ಯಾಲ್ಯೂ ಮಾಡತಕ್ಕ ಕಾಲದಲ್ಲಿ ಬಹಳ ಕಿರುಕುಳಗಳಿವೆ. ಆ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಇದರಿಂದ ಕಾಲ ವಿಳಂಬವಾಗುವುದಲ್ಲದೆ, ಲಂಚ ರುಷುವತ್ತುಗಳಿಗೆ ಅವಕಾಶವಾಗುತ್ತದೆ, ಇದು ಅನಾವಶ್ಯಕ. ಇದನ್ನು ತೆಗೆದು ಹಾಕಬೇಕೆಂದು ನನ್ನ ಅಭಿಪ್ರಾಯ. ಮತ್ತೆ ಇದನ್ನು 20 ವರ್ಷಗಳಲ್ಲಿ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದಾರೆ. ಮಿನಿಮಂ ನಿಗದಿ ಮಾಡಲಿಲ್ಲ. ಮ್ಯಾಗ್ಸಿಮಂ ಮಾತ್ರ ಫಿಕ್ಸ್ ಮಾಡಿದ್ದಾರೆ. ಆದ್ದರಿಂದ ಹತ್ತು ವರ್ಷಗಳಿಗೆ ಮೇಲ್ಪಟ್ಟು ಇಪ್ಪತ್ತು ವರ್ಷಗಳಿಗೆ ಒಳಪಟ್ಟು ಸೂಕ್ತ ರೀತಿಯಲ್ಲಿ ನಿರ್ಧಾರ ಮಾಡುವುದು ಒಳ್ಳೆಯದು. ರಿಬೇಟ್ ಕೊಡುವುದು ಸರಿ.

ಶ್ರೀ ಯು. ಎಂ. ಮಾದಪ್ಪ.—ಮಿನಿಮಂ ಇಪ್ಪತ್ತು ವರ್ಷಗಳೆಂದು ಮಾಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—"Not exceeding twenty years." That is the provision made. Payment of contribution ವಿಷಯದಲ್ಲಿ ಒಬ್ಬ ಮನುಷ್ಯ ಮಾರ್ಟ್‌ಗೇಜಿನ ಪೊಸೆಷನ್ನಿನಲ್ಲಿರುತ್ತಾನೆ. ಆಗ ರೈತನು ಹತ್ತು ವರ್ಷಗಳ ಕಂಟ್ರಿಬ್ಯೂಷನ್ ಕೊಡಿ ಎಂದರೆ ಆ ರೈತನ ಬಲಿಟಿ ಅವನ ತಲೆಯ ಮೇಲೆ ಬಂದು ಅವನು ಸಾಲ ತೀರಿಸುತ್ತಾನೆಯೇ ? ಇಲ್ಲ. ಆಗ ಭೂಮಿಯನ್ನೂ ಸಹ ಬಿಟ್ಟುಕೊಡುತ್ತಾನೆ. ಅವನಿಗೆ ಹಣ ಕೊಡುವುದಕ್ಕೆ ಚೈತನ್ಯವಿರುವುದಿಲ್ಲ. ಇನ್ನೂ ನಾಲ್ಕು ವರ್ಷಗಳ ಕಾಲ ಭೂಮಿಯನ್ನು ಭೋಗ್ಯ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಂತಹ ಸನ್ನಿವೇಶಕ್ಕೆ ಅವಕಾಶ ಕೊಡಬಾರದು.

Sri H. K. VEERANNA GOWDH.—He has got the right only for reimbursement but he has no right to continue in possession of the land.

ಶ್ರೀ ಎಚ್. ಎಂ. ಚನ್ನಬಸಪ್ಪ.—ಡಾ॥ ನಾಗನಗೌಡರ ಸಮಿತಿಯವರು ಶಿಫಾರಸ್ಸು ಮಾಡಿರುವಂತೆ ವಾಟರ್ ರೇಟಿನಲ್ಲಿ ಒಂದು ಮಿನಿಮಂ, ಮ್ಯಾಗ್ಸಿಮಂ ಇರಬೇಕು. ಧಾರವಾಡ, ಬಿಜಾಪುರದ ಪ್ರಾಂತ್ಯಗಳಲ್ಲಿ ವಾಟರ್ ರೇಟ್ ಸುಮಾರು 60-70-100 ರೂಪಾಯಿಗಳಿಗೆ ಹೋಗುತ್ತದೆ. ಇಲ್ಲಿ ಸರಿಯಾದ ಅಂಕಿಅಂಶಗಳಿಲ್ಲ. ನಮ್ಮಲ್ಲಿ ವಾಟರ್ ರೇಟ್ 10-12 ರೂಪಾಯಿಗಳ ಮೇಲಿಲ್ಲ. ಅಧಿಕಾರಿಗಳು 60 ರೂಪಾಯಿಗಳನ್ನು ಹಾಕುವುದರಿಂದ ವ್ಯವಸಾಯಗಾರರಿಗೆ ಕಷ್ಟವಾಗುತ್ತದೆ. ಆದ್ದರಿಂದ ವ್ಯವಸಾಯ ಮಾಡತಕ್ಕಂಥವನಿಗೆ ಇಷ್ಟು ಹಾಕಬೇಕೆಂದು ಮಿನಿಮಮ್ಮನ್ನು ವಿಧಿಸಿ, ಹಾಗೂ ಉತ್ತಮ ದರ್ಜೆಯಲ್ಲಿ ವ್ಯವಸಾಯ ಮಾಡುವವರಿಗೆ, ಕಬ್ಬು ಬೆಳೆಯುವವರಿಗೆ ಮ್ಯಾಗ್ಸಿಮಂ ತೆರಿಗೆಯನ್ನು ಶಾಸನದಲ್ಲಿ ನಿರ್ಧಾರ ಮಾಡದಿದ್ದರೆ, ಅಧಿಕಾರಿಗಳ ಕೈಯಲ್ಲಿ ಅಂತಹ ಶಾಸನಗಳನ್ನು ಕೊಟ್ಟರೆ ರೈತರಿಗೆ ಕಷ್ಟವಾಗುತ್ತದೆ. ಇದನ್ನು ಶಾಸನದಲ್ಲಿ ಮಾಡುವುದು ಒಳ್ಳೆಯದು. ವಾಟರ್ ರೇಟ್ ಫಿಕ್ಸ್ ಮಾಡುವಾಗ ಒಂದು ಪ್ರಶ್ನೆ ಏಳುತ್ತದೆ. ನೀವು ಈ ಮಸೂದೆಯನ್ನು ಮಾಡುವಾಗ ಹೊಸದಾಗಿ ವಾಟರ್ ರೇಟನ್ನು ಫಿಕ್ಸ್ ಮಾಡುತ್ತಿದ್ದೀರಿ. ಹಿಂದಿನ ವಾಟರ್ ರೇಟನ್ನು ಈ ಮಸೂದೆಯಲ್ಲಿ ಮರ್ಜ್ ಮಾಡಿದ್ದೀರಿ. ಈಗ ಹೊಸದಾಗಿ ಮಾಡತಕ್ಕಂಥ ಕಾಮಗಾರಿಗಳು ಏನಿವೆಯೋ ಅವುಗಳ ಮೇಲೆ ವಾಟರ್ ರೇಟನ್ನು ಬೇರೆಯಾಗಿಯೇ ಇಟ್ಟುಕೊಂಡು ಫಿಕ್ಸ್ ಮಾಡುತ್ತಾರೆ. ದೊಡ್ಡ ದೊಡ್ಡ ಕಾಮಗಾರಿಗಳನ್ನು ಮಾಡಿದ ಮೇಲೆ ವಾಟರ್ ರೇಟನ್ನು ಕಂಬಾಯದಲ್ಲಿ ಮರ್ಜ್ ಮಾಡಿದ್ದಾರೆ, ವಾಟರ್ ರೇಟ್ ಹೆಚ್ಚಿಗೆ ಮಾಡುವ ಅಧಿಕಾರವಿದೆ. ಅಂತಹ ಕೇಸುಗಳು ಬಹಳ ಇವೆ. ಇದಕ್ಕೆ ಯಾವ ರೀತಿ ಮಾಡಬೇಕು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಏಕೆಂದರೆ ಈಗ ಹೊಸ ಒಂದು ವಾತಾವರಣದಲ್ಲಿ ವಾಟರ್ ರೇಟನ್ನು ಹೆಚ್ಚಿಗೆ ಮಾಡುವ ಸ್ಥಿತಿಯಲ್ಲಿರುವಾಗ ಹೆಚ್ಚು ವಾಟರ್ ರೇಟ್ ಒರುವುದಕ್ಕೆ ಇನ್ನೂ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈಗ ಬೈಫರ್‌ಕೇಟ್ ಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಬೇಕು. ಈಗ ಇಷ್ಟು ವಿಷಯಗಳನ್ನು ಸರ್ಕಾರದವರು ಗಮನದಲ್ಲಿಟ್ಟು ಸೆಲೆಕ್ಟ್ ಕಮಿಟಿಯಲ್ಲಿ ಈ ವಿಷಯಗಳನ್ನು ಸ್ಥೂಲವಾಗಿ ಪರಿಶೀಲಿಸಿ ಸ್ಥಳ ಸ್ಥಳಕ್ಕೂ ಪ್ರಾಜೆಕ್ಟ್ ಪ್ರಾಜೆಕ್ಟಿಗೂ ವ್ಯತ್ಯಾಸವಿರುವಂತೆ ಷೆಡ್ಯೂಲು ಹಾಕಬೇಕು. ಆ ಷೆಡ್ಯೂಲಿನಲ್ಲಿ ಮಲೆನಾಡು ಮತ್ತು ಮೈದಾನ ಡಿಫೈನ್ ಮಾಡಬೇಕು ಮತ್ತು ಸಣ್ಣಪುಟ್ಟ ನೀರಾವರಿ ಕಾಂಗಾರಿಗಳು, ದೊಡ್ಡ ಕಾಂಗಾರಿಗಳು, ಐದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟಿರುವುದು ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಒಳಪಟ್ಟಿರುವುದು ಇವುಗಳಿಗೆ ಷೆಡ್ಯೂಲು ಮಾಡಬೇಕು. ನೇರವಾಗಿ ನೀರನ್ನು ಉಪಯೋಗ ಮಾಡುವುದು, ಅಪ್ರತ್ಯಕ್ಷವಾಗಿ (ಇಂಡೈರೆಕ್ಟಾಗಿ) ನೀರನ್ನು ಉಪಯೋಗ ಮಾಡುವುದು ಮತ್ತು ಸೀಪೇಜ್ ವಾಟರ್ ಉಪಯೋಗಿಸುವುದು ಇದಕ್ಕೆ ಷೆಡ್ಯೂಲು ತಯಾರಿಸಿ ಅದಕ್ಕೆ ಪರಮಾವಧಿ ಮತ್ತು ಕನಿಷ್ಠಾವಧಿ ಈ ಶಾಸನದಲ್ಲೇ ನಮೂದು ಮಾಡಬೇಕು. ಎಲ್ಲವನ್ನೂ ರೂಲ್ಸ್‌ನಲ್ಲಿ ಪ್ರೊವೈಡ್ ಮಾಡುತ್ತೇವೆಂದು ಹೇಳುವುದಕ್ಕೆ ಬದಲಾಗಿ ಈ ಶಾಸನದಲ್ಲೇ ಅಡಕವಾಗಿರುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ನಮ್ಮ ಮುಂದೆ ತಂದಿರತಕ್ಕಂಥ ಮಸೂದೆಯ ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಬಹಳ ವಿವರವಾಗಿ ತಿಳಿಸಿದ್ದಾರೆ. ನಾವು ಈ ಮಸೂದೆಯನ್ನು ಬಹಳ ಆಳವಾಗಿ ಪರಿಶೀಲಿಸಬೇಕಾಗಿದೆ. ಎರಡನೆಯ ಕ್ಲಾಜಿನ (c) ಭಾಗದಲ್ಲಿ ನೀರಾವರಿ ಕಾಮಗಾರಿ ಎಂಬುದರಲ್ಲಿ "ಎಲ್ಲ ಕಾಲುವೆಗಳು, ನಾಲೆಗಳು, ಕೆರೆಗಳು, ಬಾವಿಗಳು, ಜಲಾಶಯಗಳು, ಅಣೆಕಟ್ಟುಗಳು, ಹೊಂಡಗಳು, ಊಟೆಗಳಿರುವ ಹೊಂಡಗಳು, ಕುಂಟೆಗಳು, ಮತ್ತು ತಲಪರಿಕೆಗಳು" ಎಂದು ಹೇಳಿದೆ. ಈ ಮಸೂದೆಯನ್ನು ನಮ್ಮ ಮುಂದಿಡುವಾಗ ರೈತರ ಕಷ್ಟ ಸುಖಗಳನ್ನು ಯೋಚನೆ ಮಾಡಿ ಪರಮಾವಧಿ ರೇಟನ್ನು ಗೊತ್ತುಮಾಡಬೇಕು. ರೈತರಲ್ಲಿ ಅವಿದ್ಯಾವಂತರ ಸಂಖ್ಯೆ ಹೆಚ್ಚಾಗಿರುವ ಕಾಲದಲ್ಲಿ, ನಾಲೆಗಳು, ಕೆರೆಗಳು, ಎಂದೇನು ಹೇಳುತ್ತೀರೋ ಅವುಗಳಿಗೆ ನೀರು ಸರದಿ ಯಾವ್ಯಾವ ದರ್ಜೆಗೆ ಏನು ಹಾಕಬಹುದೆಂದು ಯೋಚನೆ ಮಾಡಿ ಮಾಡಬಹುದಾಗಿತ್ತು. ರೈತರ ಜಮೀನು ಪಕ್ಕದಲ್ಲೇ ತಲಪರಿಕೆ, ಹೊಂಡ ಇದ್ದು ಅದರ ನೀರನ್ನು ಉಪಯೋಗಿ

ನಲು ಅವಕಾಶವಿದ್ದ ಕಾಲದಲ್ಲಿ ನೀರು ಸರದಿಯನ್ನು ನಿರ್ಧರಿಸಲು ಈಗ ಇರುವ ನಿಯಮದಿಂದ ಅನಾನುಕೂಲವಾಗುತ್ತದೆ. ದೇಶದ ದೃಷ್ಟಿಯಿಂದ ಮತ್ತು ರೈತರ ದೃಷ್ಟಿಯಿಂದ ಅನ್ಯಾಯವಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಪರಮಾವಧಿ ಎಂದು ತಾವು ಹೇಳುವುದೇನು ?

ಶ್ರೀ ಎಪ್. ಜಿ. ನರಸಿಂಹೇಗೌಡ.—ಹದಿಮೂರು ರೂಪಾಯಿಗಳೋ ಏನೋ ತಾವು ಪರಮಾವಧಿ ನೀರು ಸರದಿ ಹಾಕುವ ವಿಚಾರ ಈ ವಿಷಯದಲ್ಲಿ, ಅದರಲ್ಲೂ ಹೊಂಡಗಳು, ತಲಪರಿಕೆಗಳು ಮುಂತಾದುವುಗಳ ನೀರನ್ನು ಉಪಯೋಗಿಸುವುದನ್ನು ನಿಗದಿ ಮಾಡತಕ್ಕ ಅವಕಾಶ ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಆದರೆ ಅಧಿಕಾರಿಗಳಿಗೇ ಕೊನೇ ಅಪೀಲಿರುವುದು, ಅವರ ನಿರ್ಧಾರವೇ ಕೊನೆಯದು ಎಂದು ಹೇಳುವುದಾದರೆ ನಿಜವಾಗಿಯೂ ಕೂಡ ಈಗ ಎರಡನೆಯ ಕ್ಲಾಜಿನಲ್ಲಿ ನಮೂದಿಸಿರುವ ಮೂಲಗಳಿಂದ ನೀರನ್ನು ಉಪಯೋಗಿಸುವ ಸಣ್ಣಪುಟ್ಟ ಆಶ್ರಯಗಳಿಂದ ನೀರನ್ನು ಪಡೆಯುವ ರೈತರಿಗೆ ಮುಂದೆ ನ್ಯಾಯ ದೊರಕಿಸುವುದಕ್ಕೆ ಹಕ್ಕೇನಿದೆ, ಅದಕ್ಕೆ ಅವಕಾಶವಿಲ್ಲದಂತಾಗುತ್ತದೆ. ಆದ್ದರಿಂದ ನಾನು ಈ ವಿಷಯದಲ್ಲಿ ಹೇಳುವುದು, ಬಾವಿಗಳು, ಜಲಾಶಯಗಳು, ಹೊಂಡಗಳು, ಊಟೆಗಳು, ಕುಂಟೆಗಳು, ತಲಪರಿಕೆಗಳು ಎಂಬ ಹೆಸರುಗಳನ್ನು ಈ ಮಸೂದೆಯಲ್ಲಿ ಪೂರ್ಣವಾಗಿ ತೆಗೆದು ಹಾಕಬೇಕು, ತೆಗೆಯದಿದ್ದರೆ ನಿಜವಾಗಿಯೂ ಬಹಳ ಅನ್ಯಾಯವಾಗುತ್ತದೆ.

ಆಮೇಲೆ ಎರಡನೆಯದಾಗಿ ಪರಮಾವಧಿ ನೀವು ಗೊತ್ತುಮಾಡುವ ಸಂದರ್ಭದಲ್ಲಿ ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದಂತೆ ಯಾವ್ಯಾವ ಭೂಮಿಗೆ ಎಷ್ಟೆಷ್ಟು ವಿಧಿಸುತ್ತೀರೆಂಬ ನಿಯಮ ನಿಮ್ಮ ಮಸೂದೆಯಲ್ಲಿ ಅಡಕವಾಗಿಲ್ಲ. ನಾನು ಇಷ್ಟೇ ಹೇಳುವುದು; ನೀವು ನಮ್ಮ ಮುಂದೆ ಈ ಮಸೂದೆಯನ್ನು ತಂದು ಇಡುವುದಕ್ಕೆ ಮುಂಚೆ ಸಾಯಿಲ್ ಸರ್ವೆ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಏಕೆಂದರೆ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಒಳ್ಳೆಯ ಸಾಯಿಲ್ ಇರಬಹುದು. ಆದರೆ ಹೈದರಾಬಾದು ಮತ್ತು ಬೊಂಬಾಯಿ ಕರ್ಣಾಟಕದ ನಾಲಾ ಪ್ರದೇಶದಲ್ಲಿ ನಾನು ತಿಳಿದುಕೊಂಡಿರುವ ಹಾಗೆ ಎಕರೆಗೆ 50 ರೂಪಾಯಿಗಳಿರುವ ಜಮೀನಿದೆ. ಅಂಥ ಕಡೆ ನೀರನ್ನು ಉಪಯೋಗಿಸುವವರಿಗೆ ನೀರು ಸರದಿ ಕೊಡಿ ಎಂದು ಹೇಳುವಾಗ ನೀವು ಒಂದುಪಕ್ಷ ಗುಮಾಸ್ತೆಯ ವರದಿ ತರಿಸಿ ಕಣ್ಣು ಮುಚ್ಚಿಕೊಂಡು ಅದರಂತೆ 50 ಎಕರೆಗೆ, ಎಕರೆಗೆ 500 ರೂಪಾಯಿಗಳಂತೆ ನಿಗದಿ ಮಾಡಿದರೆ 25 ಸಾವಿರ ರೂಪಾಯಿಗಳಾಗುತ್ತವೆ. ಆದರೆ ಆಸ್ತಿಯೆಲ್ಲಾ ಮಾರಿದರೆ ಈ ದಿವಸ ಐದು ಸಾವಿರ ರೂಪಾಯಿಗಳು ಬರುವುದಿಲ್ಲ. ಇಂತಹ ಸಾಯಿಲ್ ಇಂತಹ ಕಡೆ ಇದೆ, ಇಷ್ಟು ಬೆಲೆ ಬಾಳುತ್ತದೆ, ಇರುವ ನಾಲ್ಕು ಡಿವಿಷನ್‌ಗಳಲ್ಲಿ ಇಂಥ ಡಿವಿಷನ್‌ಗಳಲ್ಲಿ ಇಂಥ ಬೆಲೆ ಬಾಳುವ ಜಮೀನಿದೆ ಎಂದು ಅಂಕಿಅಂಶವಾದರೂ ಕೊಟ್ಟಿದ್ದರೆ ನಿಮ್ಮ ಮುಂದೆ ನಾವು ಇದನ್ನೆಲ್ಲಾ ಹೇಳುವುದಕ್ಕೆ ಮೊದಲೇ ತಲೆ ಬಾಗಬೇಕಾಗಿತ್ತು, ಈಗ ನಮ್ಮ ಮುಂದೆ ಅಂತಹ ವಿವರಗಳು ಏನೂ ಇಲ್ಲ. ಈ ದಿವಸ ನೀರು ಸರದಿ ನಿಗದಿ ಮಾಡಿದ ತಕ್ಷಣ ಸರ್ಕಾರಕ್ಕೆ ಅನೇಕ ನಿಯೋಗಗಳು ಬರುತ್ತವೆ. ಆದ್ದರಿಂದ ನೀವು ಗ್ರೇಡು ವಾರು ವಿಂಗಡಿಸಿ ಎಂದು ಹೇಳುವುದು. ಈಗ ನಾಲ್ಕು ಡಿವಿಜನ್‌ಗಳಲ್ಲಿರುವ ಸಾಯಿಲ್ ವಿಂಗಡಿಸಿ ಮಿನಿಮಂ, ಮ್ಯಾಗ್ಸಿಮಂ ನಿಗದಿ ಮಾಡಲು ಈ ಮಸೂದೆಯಲ್ಲೇನಾದರೂ ಅವಕಾಶ ಮಾಡಿಕೊಡದಿದ್ದರೆ ನಿಜವಾಗಿಯೂ ಕೂಡ ರೈತರಿಗೆ ಬಹಳ ತೊಂದರೆಯಾಗುತ್ತದೆ. ಈಗ ಕೆಲವು ಮೈನರ್ ಕೆರೆಗಳಿಗೆ ಮತ್ತು ಮೇಜರ್ ಕೆರೆಗಳಿಗೆ ನಿಗದಿಯಿಲ್ಲದೆ ಕಾಂಟ್ರಿಬ್ಯೂಷನ್ ಹಾಕಲು ಅವಕಾಶವಿದೆ. ಮೈನರ್ ಕೆರೆ ಅಚ್ಚುಕಟ್ಟಿನಲ್ಲಿ ಎಕರೆಗೆ 200 ರೂಪಾಯಿಗಳವರೆಗೆ ಕಾಂಟ್ರಿಬ್ಯೂಷನ್ ಕೊಡಬೇಕೆಂದು 1952ನೆಯ ಇಸವಿಯಲ್ಲಿ ನಿಗದಿ ಮಾಡಿ ಈಚೆಗೆ ಹೋದ ವರ್ಷ ಅದನ್ನು 300 ರೂಪಾಯಿಗಳಿಗೆ ಏರಿಸಿದ್ದೀರಿ. ಇದರಿಂದೇನಾಗುತ್ತಿದೆಯೆಂದರೆ ರೈತರಿಗೆ ಹೊರೆ ಜಾಸ್ತಿಯಾಗುತ್ತದೆಯೇ ವಿನಾ ವಸೂಲಿ ವಿಷಯದಲ್ಲಾಗಲೀ, ಅವರಿಗೆ ನೇರವಾಗಿ ಆದಾಯ ಬರುವ ವಿಷಯದಲ್ಲಾಗಲೀ ನಿಜವಾಗಿಯೂ ಯಾವ ತರಹ ಸಹಾಯವೂ ಆಗುತ್ತಿಲ್ಲ. ನಾನು ಈ ಮಸೂದೆ ವಿಷಯದಲ್ಲಿ ಇಷ್ಟು ಸಲಹೆ ಮಾಡುತ್ತೇನೆ. ಸಾಮಾನ್ಯವಾಗಿ ಕನಿಷ್ಟಪಕ್ಷ ಎರಡು ಸಾವಿರ ರೂಪಾಯಿಗಳಗೆ ಒಳಪಟ್ಟ ಆದಾಯವಿರುವ ಮೈನರ್ ಕೆರೆಗಳ ಸಂಬಂಧದಲ್ಲಿ ವಸೂಲು ಮಾಡುವ ಕಾಂಟ್ರಿಬ್ಯೂಷನ್ ನಿಯಮವನ್ನು ತಳ್ಳಿಹಾಕುವುದು ಬಹಳ ಒಳ್ಳೆಯದು. ಇದನ್ನು ಸೆಲೆಕ್ಟ್ ಕಮಿಟಿಯು ಮುಂದೆ ತಂದು ಮೈನರ್ ಕೆರೆಗಳಿಗೆ ಅವಕಾಶ ಕೊಡಬೇಕು.

11-30 A.M.

ಇನ್ನು ಈ ಕಾಂಟ್ರಿಬೂಷನ್ ವಿಚಾರದಲ್ಲಿ ಕಂತಿನ ಮೇಲೆ ಹಣ ಪಾವತಿ ಮಾಡತಕ್ಕ ಅಚ್ಚುಕಟ್ಟುದಾರರ ಮೇಲೆಲ್ಲಾ ಬಡ್ಡಿ ವಿಧಿಸಬೇಕೆಂದು ತಿಳಿಸಿದ್ದಾರೆ. ರೈತನು ಬೆಳೆ ತೆಗೆಯುವ ಜಮೀನಿಗೆ ಆ ಕೆರೆಯಿಂದ ನೀರಿನ ಸರಬರಾಯಿ ಇರಲಿ—ಇಲ್ಲದಿರಲಿ ಆತನ ಮೇಲೆ ಈ ತೆರಿಗೆ ಹಾಕಬೇಕೆಂದು ಹೇಳಿರುವುದು ಯಾವ ನ್ಯಾಯ ? ನನಗೆ ಗೊತ್ತಿರುವ ಹಾಗೆ ಈಗ ಇರತಕ್ಕ ಕೆರೆಗಳಲ್ಲಿ ಅನೇಕ ಕೆರೆಗಳು ಸಾವಿರಾರು ವರ್ಷಗಳ ಕೆಳಗೆ ಕಟ್ಟಿದಂಥವುಗಳಾಗಿವೆ. ಈ ದಿವಸ ಅವುಗಳೆಲ್ಲಾ ಹೂಳು ಮುಚ್ಚಿಕೊಂಡು ಹೋಗಿ ನೀರು ಎಷ್ಟು ನಿಲ್ಲಬೇಕಾಗಿತ್ತೋ ಅಷ್ಟು ಈಗ ನಿಲ್ಲುತ್ತಿಲ್ಲ. ತಾವೀ ದಿವಸ ರಾಜ್ಯದಲ್ಲಿರತಕ್ಕ ಕೆರೆಗಳನ್ನೆಲ್ಲಾ ಸರ್ವೆಮಾಡಿ ಯಾವಯಾವ ಕೆರೆಯಲ್ಲಿ ಎಷ್ಟೆಷ್ಟು ನೀರು ನಿಲ್ಲುತ್ತದೆ ಎಂಬುದನ್ನು ಪರಿಶೀಲನೆ ಮಾಡಿದರೆ ಆಗ ತಮಗೆ ಈ ಕೆರೆಗಳಲ್ಲಿ ಕೇವಲ ಮೂರನೇ ಒಂದು ಭಾಗದ ಕೆರೆಗಳು ಮಾತ್ರ ಅಷ್ಟಿಷ್ಟು ನೀರು ನಿಲ್ಲುತ್ತಹೆಂಬ ಅಂಶ ಅರಿವಾಗುತ್ತದೆ. ವಾಸ್ತವಾಂಶ ಹೀಗಿರುವಾಗ ತಾವು ಕಡ್ಡಾಯವಾಗಿ 300 ರೂಪಾಯಿಗಳ ಕಾಂಟ್ರಿಬ್ಯೂಷನ್ ಮತ್ತು 12 ರೂಪಾಯಿಗಳ ಕಂದಾಯ ಕೊಡಲೇ ಬೇಕೆಂದು ಹೇಳಿದ್ದೀರಿ. ಹೀಗೆ ಜಾಸ್ತಿಮಾಡುವುದಕ್ಕೆ ಕಾರಣ ಈ ಕೆರೆಗಳ ಜೀರ್ಣೋದ್ಧಾರವೇ ಮುಖ್ಯಾಂಶ ಎಂದು ತಿಳಿಸಲಾಗಿದೆ. ಆದರೆ $\frac{2}{3}$ ಭಾಗದಷ್ಟು ಕೆರೆಗಳಲ್ಲಿ ನೀರೇ ನಿಲ್ಲದಿರುವಾಗ ತಾವು ಈ ರೀತಿ ಎಲ್ಲಾ ತರಿ ಅಚ್ಚುಕಟ್ಟಿನ ಮೇಲೂ ಹೀಗೆ ಟ್ಯಾಕ್ಸ್ ಹಾಕುವುದು ಸರಿಯಾದ್ದಲ್ಲವೆಂದು ಹೇಳುತ್ತೇನೆ, ತಾವು ಮೊದಲು ಕೆರೆಗಳ ಜೀರ್ಣೋದ್ಧಾರ ಮಾಡಿ ಅನಂತರ ತಾವು ಈ ಬೆಟರ್‌ಮೆಂಟ್ ಲೆವಿ ಹಾಕಿ. ಆಗ ನಾವು ಅದಕ್ಕೆ ಬೇಡವೆಂದು ಹೇಳುವುದಿಲ್ಲ. ಆದರೆ ತಾವು ಇಂಥ ಒಂದು ಬಿಲ್ಲನ್ನು ಸಭೆಯ ಮುಂದೆ ತರುವುದಕ್ಕೆ ಮುಂಚಿತವಾಗಿ ದೇಶಾದ್ಯಂತವೂ ನಮ್ಮಲ್ಲಿ ಎಷ್ಟು ಕೆರೆಗಳಿವೆ. ಈಪೈಕಿ ಎಷ್ಟು ಕೆರೆಗಳಲ್ಲಿ ಸರಿಯಾಗಿ ನೀರು ನಿಲ್ಲುತ್ತಿದೆ. ಎಷ್ಟು ಕೆರೆಗಳಲ್ಲಿ ನೀರಿನ ಕ್ಯೆಪ್ಯಾಸಿಟಿ ಕಮ್ಮಿಯಾಗಿದೆ ಎಂಬುದರ ಬಗ್ಗೆ ಒಂದು ಸರ್ವೇ ಪರಿಶೀಲನೆ ಮಾಡಿ ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದರೆ, ಆಗ ಈ

(ಶ್ರೀ ಎನ್. ಜಿ. ನರಸಿಂಹೇಗೌಡ)

ಬಿಲ್ಲಿನ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶ ವಾಗುತ್ತಿತ್ತು.

ಶ್ರೀ ಎಚ್. ಕೆ. ವೀರಣ್ಣಗೌಡ.—ನೀವು ಹೇಳುತ್ತಿರುವುದಕ್ಕೆ ಯಾವುದು ಸಂಬಂಧವಿದೆ ?

ಶ್ರೀ ಎನ್. ಜಿ. ನರಸಿಂಹೇಗೌಡ.—ಸಂಬಂಧವಿದೆ. ಈ ಕಾಂಟ್ರಿಬ್ಯೂಷನ್ ವಿಧಿಸುವುದರ ವಿಚಾರ ಇಷ್ಟಾಯಿತು. ಇನ್ನು ಇದನ್ನ ವಸೂಲ್ಮಾಡತಕ್ಕ ಬಗ್ಗೆ ಇಡಬೇಕಾದ ಲೆಕ್ಕ ಪತ್ರಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಸರ್ಕಾರದವರು ಈ ಲೆಕ್ಕಪತ್ರಗಳನ್ನಿಡತಕ್ಕ ವಿಚಾರಕ್ಕೆ ಹೆಚ್ಚಿನ ನಿಗಾ ಕೊಡಬೇಕಾಗಿದೆ. ರೈತನ ಮೇಲೆ ಈ ಒಂದು ಹೊರೆ ಬಹಳ ವರ್ಷಗಳ ತನಕ ಬೀಳುತ್ತಿರುತ್ತದೆ. ಈ ಹಿಂದೆ ಇದೇ ಸಭೆಯಲ್ಲಿ ಮಂಡ್ಯಾ ಜಿಲ್ಲೆಯ ರೈತರ ಕಾಂಟ್ರಿಬ್ಯೂಷನ್ ವಸೂಲಿಯ ವಿಚಾರದಲ್ಲಿ ಸರಿಯಾಗಿ ಲೆಕ್ಕ ಪತ್ರಗಳನ್ನಿಡದೆ ಅನೇಕರಿಂದ ಕಾಂಟ್ರಿಬ್ಯೂಷನ್ ಹಣ ವಸೂಲಾಗಿದ್ದರೂ ಲೆಕ್ಕದಲ್ಲಿ ಇನ್ನೂ ಬಾಕಿ ತೋರಿಸುತ್ತಲೇ ಬಂದಿದ್ದಾರೆಂದು ಯಾವ ರೀತಿ ಚರ್ಚೆಗಳಾಗಿವೆ ಎಂಬುದು ಮಾನ್ಯ ಸದಸ್ಯರನೇಕರಿಗೆ ತಿಳಿದಿರತಕ್ಕ ವಿಚಾರವೇ ಆಗಿದೆ. ಆದ್ದರಿಂದ ಈ ಒಂದು ಉದಾಹರಣೆಯನ್ನು ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು ಈ ಬಗ್ಗೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕೆಂದು ತಿಳಿಸುತ್ತೇನೆ. ಈವರೆಗೂ ನಾನು ಹೇಳಿರತಕ್ಕ ಸೂಚನೆಗಳನ್ನು ಸೆಲೆಕ್ಟ್ ಸಮಿತಿಯವರ ಮುಂದಿಟ್ಟು ಅವರು ಮುಂದಿನ ಸಾರ್ತಿಗೆ ಈ ಬಿಲ್ಲನ್ನು ಈ ಸಭೆಗೆ ತರುವಾಗ ದೇಶಾದ್ಯಂತವೂ ಒಂದು ಸರ್ವೆ ನಡೆಸಿ ಯಾವಯಾವ ಪ್ರದೇಶಕ್ಕೆ ಈ ನೀರಾವರಿ ಆಸರೆಯ ಅನುಕೂಲ ಹೆಚ್ಚಾಗಿದೆ, ಎಲ್ಲೆಲ್ಲಿ ಕಡಮೆಯಿದೆ, ಈ ಅನುಕೂಲದ ಮಟ್ಟವನ್ನು ನಿರ್ಧರಿಸಿ ಇದರ ಮೇಲೆ ಕನಿಷ್ಠಾವಧಿ ಮತ್ತು ಪರಮಾವಧಿ ಮೊಬಲಗನ್ನು ನಿರ್ಧಾರ ಮಾಡತಕ್ಕದ್ದು ನ್ಯಾಯವಾದುದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri A. V. NARASIMHA REDDY (Bangalore South).—Sir, now I move for closure.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೇಬಿಹಾಳ್).—ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಮೈಸೂರು ನೀರಾವರಿಯ ಸುಧಾರಣಾ ಅಂಶದಾನ ಮತ್ತು ನೀರಿನ ಪಟ್ಟಿಗಳ ಸಂಬಂಧದ ವಿಧೇಯಕವನ್ನು ಸಂಪೂರ್ಣವಾಗಿ ಅನುಮೋದಿಸುತ್ತ ನಮ್ಮ ಬಿಜಾಪುರ ಜಿಲ್ಲೆಯ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದವರ ಲಕ್ಷ್ಯಕ್ಕೆ ತರಬೇಕೆಂದಿಚ್ಛಿಸುತ್ತೇನೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾಗಿರುವಂಥ ಜಮೀನಿನ ವಿಸ್ತೀರ್ಣ 37 ಲಕ್ಷ ಎಕರೆಗಳು ಆದರೆ ಈ ಪೈಕಿ ಈಗ ಸರ್ಕಾರಿ ಲೆಕ್ಕ ಇರುವುದು 53,188 ಎಕರೆಗಳು. ಈ ಪೈಕಿ ನಾಲೆ, ಕೆರೆ, ಬಾವಿ ಆಸರೆಗಳಿಂದ ವ್ಯವಸಾಯ ಆಗತಕ್ಕ ಜಮೀನಿನ ವಿಸ್ತೀರ್ಣ 49 ಸಾವಿರ ಎಕರೆಗಳು. ಆದರೆ ಈ ದಿವಸ ಅಲ್ಲಿ ಹಾಲಿ ಸಾಗುವಳಿಯಲ್ಲಿರತಕ್ಕ ಜಮೀನು ಕೇವಲ 4—5 ಸಾವಿರ ಎಕರೆಗಳು ಮಾತ್ರ ಆದರೆ ಅಷ್ಟಾಗಿ ಆ ಪ್ರದೇಶದಲ್ಲಿ ಉದ್ದೇಶ ಪಟ್ಟು ಕೆರೆ ಕಟ್ಟಿಸಲೇಬೇಕೆಂದೇನೂ ಯಾರೂ ಪ್ರಯತ್ನಪಡಲಿಲ್ಲ, ನಮ್ಮ ಪ್ರದೇಶದಲ್ಲಿ ಆಗಿಂದಾಗ್ಗೆ ಬರ ಬೀಳುತ್ತಲೇ ಇದೆ. ಹಾಗೆ ಒದಗಿದ್ದ ಕಾಲಕ್ಕೆ ಜನರಿಗೆ ಕೂಲಿಕೆಲಸ ಕೊಡುವಸಲುವಾಗಿ ಈ ಕೆಲವಾರು ಸಣ್ಣಪುಟ್ಟ ಕೆರೆಗಳ ಕೆಲಸ ಅಲ್ಲಿ ನಡೆಸಲಾಗಿದೆ. ಆದಾಗ್ಯೂ ಈಗ್ಗೂ ಆ ಪ್ರದೇಶದಲ್ಲಿ ತಪ್ಪದಂತೆ ಮೂರು ವರ್ಷಕ್ಕೊಮ್ಮೆ ಬರ ಬೀಳುತ್ತಲೇ ಇದೆ. ಇಂಥ ವೇಳೆಯಲ್ಲಿ ಜನರಿಗೆ ಹೊಟ್ಟೆಗಿಲ್ಲದ ಸ್ಥಿತಿ ಒದಗಿದಾಗ ಅವರಿಗೆ ಉದ್ಯೋಗ ಕೊಟ್ಟು ಅನ್ನ ಕೊಡತಕ್ಕ ಉದ್ದೇಶದಿಂದ ಕೆಲವು ಕೆರೆಗಳು ಆಗ್ಯಾವು. ಈಗ ಅಲ್ಲಿರತಕ್ಕ ಕೆರೆಗಳೆಲ್ಲಾ ಇಲ್ಲಿಗೆ 7—8ವರ್ಷಗಳ ಕೆಳಗೆ ಕಟ್ಟಿದವುಗಳಾಗಿವೆ. ಅದುದರಿಂದ ಆ ಕೆರೆಗಳಲ್ಲಿ ನೀರು ಯಾವಾಗ ಇರುತ್ತದೆಂದರೆ ಯಾವಾಗ ಮಳೆ ಆಗುತ್ತದೆಯೋ ಆಗ ಅವುಗಳಲ್ಲಿ ನೀರು ಇರುತ್ತದೆ. ಮಳೆಯಿಲ್ಲದಾಗ ಈ ಕೆರೆಗಳಲ್ಲಿ ನೀರಿರುವುದಿಲ್ಲ. ಅಲ್ಲಿಯ ನೀರು ಬಂಗಾರ ಇದ್ದಹಾಗೆ. ಬರಗಾಲಕ್ಕೆ ಸರಿಯಾಗಿ ಕೆರೆಗಳಲ್ಲಿ ನೀರು ಹೋಗಿಬಿಡುತ್ತೆ. ಬೆಳೆಯೂ ಆಗುವುದಿಲ್ಲ. ಇಂಥ ಪರಿಸ್ಥಿತಿ ಇರುವ ಕೆರೆಗಳಲ್ಲಿ ವಾಟರ್‌ರೇಟ್ ಕೊಟ್ಟರೆ ನಮಗೇನೂ ಫಾಯಿದೆ ಆಗಲಾರದೆಂದು ನಮ್ಮ ಕಡೆ ರೈತರು ಆ ನೀರನ್ನು ಬಳಸುತ್ತಲಿಲ್ಲ. ಆದರೆ ಸರ್ಕಾರದವರು ಸಾರೋದ್ಧರವಾಗಿ ನೀರು ಸರಬರಾಯಿ ವ್ಯವಸ್ಥೆ ಮಾಡಲು ಸಿದ್ಧವಾಗಿದ್ದರೆ ಈ ವಾಟರ್ ರೇಟನ್ನು ಕೊಡಲು ನಮ್ಮ ಅಭ್ಯಂತರವೇನಿಲ್ಲ. ಆದರೆ ಈವರೆಗೂ ಆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಈ ವಾಟರ್‌ರೇಟಿನ ಬಗ್ಗೆ ಬೆಟರ್‌ಮೆಂಟ್ ಟ್ಯಾಕ್ಸನ್ನು ಹಾಕಿಲ್ಲ. ಆದ್ದರಿಂದ ಈ ಪದ್ಧತಿಯಿನ್ನೂ ಅಲ್ಲಿ ಜಾರಿಗೆ ಬಂದಿಲ್ಲ. ಕೆರೆಗಳಿಗೆ ನೀರು ಬಂದು ಆ ಕೆರೆ ಕೆಳಗಿನ ಜಮೀನುಗಳಲ್ಲಿ ಬೆಳೆಯಾಗುವುದು ಬಹಳ ಅಸಂಭವ. ಯಾರಿಗೂ ನೆಚ್ಚಿಗೆಯಿಲ್ಲ. ಈ ಕಷ್ಟದೆಶೆಯಲ್ಲಿರತಕ್ಕ ಜನರು ಬೇಸತ್ತು ಆಕಾಶದ ಕಡೆಗೆ ಎದುರು ನೋಡುತ್ತಿರುವರು. ಪಂಚಾಗ ನೋಡಿಸುವುದು, ದೇವರನ್ನು ಕೇಳುವುದು, ವರ್ಷದ ಭಲಾಚಾರ ಮಳೆ—ಬೆಳೆ ಹ್ಯಾಗೆ ಎಂದು ಕೇಳುವುದಲ್ಲದೆ ಈ ವರ್ಷ ಯಾವ ಬೆಳೆಯಿಟ್ಟರೆ ಅನುಕೂಲ, ಯಾವ ಬೆಳೆಗೆ ಬಲಿಕರ ಇಲ್ಲ ಎಂದು ದೇವರನ್ನು ಕೇಳತಕ್ಕ ಪದ್ಧತಿ ನಮ್ಮಲ್ಲಿ ಈವತ್ತೂ ಇದೆ. ಈ ಪರಿಸ್ಥಿತಿಯಲ್ಲಿರತಕ್ಕ ಪ್ರದೇಶದಲ್ಲಿ ನಾಲ-ಕೆರೆಗಳಿದ್ದಾಗ್ಯೂ ಸರ್ಕಾರದವರು ಖಚಿತವಾಗಿ ನೀರನ್ನು ಕೊಟ್ಟೇತೀರುವರು ಎಂಬ ಭರವಸೆ ಅವರಿಗೆ ಇರುವುದಿಲ್ಲ. ಆದ್ದರಿಂದ ಅವರಲ್ಲಿ ಈ ಬಗ್ಗೆ ಯಾವ ಒಂದು ನೇಮವೂ ಇಲ್ಲ. ಇಂಥ ಅನುಮಾನ ಪ್ರಸಂಗದಲ್ಲಿ ನೀರನ್ನು ಕೇಳತಕ್ಕ ಮಂದಿಯೇ ಬಹಳ ಅಪರೂಪ. ಹೀಗಿರುವಾಗ ಇಂಥ ಜನರ ಮೇಲೆ ಇನ್ನು ಈ ಒಂದು ಬೆಟರ್‌ಮೆಂಟ್ ಫೀಜನ್ನು ಲೆವಿ ಮಾಡಿದರೆ ಅವರಿನ್ನೂ ಅಂಜಿಕೊಂಡು ಈ ನೀರು ಬಳಸುವುದನ್ನು ಬಿಟ್ಟುಬಿಡುತ್ತಾರೆಂಬ ಹೆದರಿಕೆ ಅಲ್ಲಿನ ಸರ್ಕಾರಕ್ಕಿತ್ತು. ಅಂಥ ಕಾಲದಲ್ಲಿ ನಾವು ಆ ಹಿಂದಿನ ಮುಂಬೈ ಸರ್ಕಾರಕ್ಕೆ ಮನವಿ ಮಾಡಿಕೊಂಡು ನಮ್ಮಲ್ಲಿಂಥ ಕಷ್ಟದೆಶೆಯಿದೆ, ನಮ್ಮಲ್ಲಿ ಯಾವುವೂ ಅಂಥ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಲ್ಲ ಎಂದು ಕೇಳಿಕೊಂಡೆವು. ಯಾವಾಗ ನಾವು ಆ ರೀತಿ ಮನವಿಮಾಡಿಕೊಂಡೆವೋ ಆಗ ಅವರು ಅಲ್ಲಿಗೆ ಮೂರು ಕೆರೆಗಳನ್ನು ಕೊಟ್ಟರು. ಆದರೆ ಆ ದಿವಸ ಅವುಗಳ ಬಗ್ಗೆ ಕೇವಲ 40 ಲಕ್ಷ ರೂಪಾಯಿಗಳ ಅಂದಾಜಾಗಿತ್ತು. ಆಗ ಕೆಲಸವನ್ನು ಕೈಗೊಳ್ಳಲಿಲ್ಲ. ಈಗ ಅದೇ ಕಾಂಗಾರಿಗೆ 80 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆ, ಈ ವರ್ಷ ಆ ಕೆಲಸ ಕೈಗೊಳ್ಳುವರೆಂದು ಆಶ್ವಾಸನ ಕೊಡಲಾಗಿದೆ. ಆ ಕೆರೆಗಳಿಂದ ನೀರನ್ನು ನಮಗೆ ಬಹಳ ಕಡಮೆ ದರದಲ್ಲಿ ಕೊಡುತ್ತೇವೆಂದು ಹೇಳಿದ್ದರು. ಆಗ ಎಕರೆಗೆ ಐದ್ಹೈದು ರೂಪಾಯಿ ಕೊಡಿ ಸಾಕು ಎಂದು ಹೇಳಿದರು. ಅದಕ್ಕೂ ಕೂಡ ರೈತರು ಬಹಳ ಹೆಚ್ಚಾಯಿತೆಂದು ಕೆಲವು ಕಡೆ ಮಧ್ಯೆ ಮಧ್ಯೆ ಒಂದೆರಡು ಎಕರೆ ಜಮೀನುಗಳನ್ನು ಬಿಟ್ಟು ಬಾಕಿ ಜಮೀನುಗಳಿಗೆ ನೀರನ್ನು ಬಳಸು

ತ್ತಿದ್ದಾರೆ. ಆ ಕಡೆ ರೈತರಿಗಿನ್ನೂ ನೀರಿನ ರುಚಿ ಸರಿಯಾಗಿ ಹತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಆ ರೈತಾಪಿ ಜನರಮೇಲೆ ಹೆಚ್ಚು ನೀರಿನ ತೆರಿಗೆ ಹಾಕಿದರೆ ಅವರು ನೀರನ್ನುಪಯೋಗಿಸುವುದನ್ನೇ ಕೈಬಿಡತಕ್ಕ ಸಂಭವ ಇದೆ. ಇದರಿಂದ ಆ ಕ್ಷಾಮಪ್ರದೇಶದ ಸ್ಥಿತಿಗತಿಗಳು ಮತ್ತಷ್ಟು ಹದಗೆಡುತ್ತವೆ. ಆದ್ದರಿಂದ ನಾನೀಗ ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ ತಾವು ಕ್ಷಾಮ ಪ್ರದೇಶಗಳು ಯಾವು ಯಾವು ಇವೆಯೋ ಅಂಥ ಪ್ರದೇಶಗಳಿಗೆ ಈ ಬೆಟರ್‌ಮೆಂಟ್ ಲೆವಿ ಹಾಕಬಾರದೆಂದು ಹೇಳುತ್ತೇನೆ. ಅಂಥ ಪ್ರದೇಶಗಳಿಗೆ ಇದನ್ನು ಬಂದ್ ಮಾಡಿ ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಘಟಪ್ರಭಾ-ಮಲಪ್ರಭಾ ಇಂಥ ದೊಡ್ಡ ದೊಡ್ಡ ನೀರಾಶ್ರಯಗಳ ಕೆಳಗೆ ಬೇಕಾದರೆ ಹಾಕಿ. ಅದಕ್ಕೆ ನಾವು ಬೇಡ ಎನ್ನುವುದಿಲ್ಲ. ಕಾರಣ ಅಲ್ಲಿ ನೀರು ಸರಬರಾಯಿನ ನಿಶ್ಚಿತ ಇದೆ ಆದರೆ ಈಗ ನಮ್ಮಲ್ಲಿರತಕ್ಕ ಕೆರೆಗಳ ಕೆಳಗೆ ಅಂಥ ಬೆಳೆಯಾಗತಕ್ಕ ಖಾತರಿಯಿಲ್ಲ. ಇಂಥ ಅಖಾತರಿ ಪ್ರದೇಶಗಳಿಗೆ ಕ್ಷಾಮ ಪ್ರದೇಶಗಳಿಗೆ, ದಯವಿಟ್ಟು ಈ ತೆರಿಯನ್ನು ಹಾಕಬೇಡಿ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಪರ್ಕ್ಯುಲೇಟೆಡ್ ನೀರನ್ನು ಉಪಯೋಗಿಸುವುದಕ್ಕೂ ಟ್ಯಾಕ್ಸ್ ಹಾಕಿದ್ದಾರೆ. ಕೆಲವು ಬಾವಿಗಳು ಇರುತ್ತವೆ. ಆದರೆ ಬೇಸಿಗೆಯಲ್ಲಿ ನೀರು ಬತ್ತಿಹೋಗುತ್ತದೆ. ಮಳೆಯಾಗಿ ಕೆರೆಗೆ ನೀರು ಬಂದರೆ, ಕೆರೆಯ ಕೆಳಗೆ ಇರುವ ಬಾವಿಗಳಲ್ಲಿ ನೀರು ದೊರೆಯುತ್ತದೆ. ಮಳೆಯಾದಾಗ ದೊರೆಯುವ ನೀರು ಸಾಕಾಗುತ್ತದೆ, ಬೆಟರ್‌ಮೆಂಟ್ ಚಾರ್ಜಸ್ ಹಾಕಿದರೆ ಯಾರೂ ನೀರು ತೆಗೆದುಕೊಳ್ಳಲು ಮುಂದೆ ಬರುವುದಿಲ್ಲ ಮಳೆಯಿಂದ ದೊರೆಯುವ ನೀರು ಸಾಕು ಎಂದು ಅನ್ನುವರು. ಆದುದರಿಂದ ಸೆಲೆಕ್ಟ್ ಕಮಿಟಿಯಲ್ಲಿ ವಿಚಾರಮಾಡಿ ಕ್ಷಾಮ ಪ್ರದೇಶದಲ್ಲಿ ಅದರಲ್ಲಿಯೂ ವಿಶೇಷವಾಗಿ ವಿಜಾಪುರ ಜಿಲ್ಲೆಯಲ್ಲಿ ಈ ಬೆಟರ್‌ಮೆಂಟ್ ಚಾರ್ಜಸ್ ಹಾಕಬಾರದೆಂದು ನಾನು ಕ್ಷಾಮ ಪ್ರದೇಶದ ಜನರ ಪರವಾಗಿ ಬಿಜಾಪುರದ ಜಿಲ್ಲೆಯ ಜನರ ಪರವಾಗಿ ಮನವಿಮಾಡಿಕೊಳ್ಳುತ್ತೇನೆ. ಯಾಕೆಂದರೆ ಮಳೆಯು ಆದರೆ ಕೆರೆಗೆ ನೀರು ಬಂದು ಹೊಲಗಳಿಗೆ ನೀರು ಕೊಡಲಾಗುವುದು. ಮಳೆಯು ಬಾರದೇ ಇದ್ದರೆ ನೀರು ಕೊಡಲು ಸಾಧ್ಯವಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಜನರು ಮಳೆಯ ನೀರೇ ಸಾಕು ಎಂದು ಅನ್ನುವರು. ಆದಕಾರಣ ಕ್ಷಾಮ ಪ್ರದೇಶವಾದ ವಿಜಾಪುರ ಜಿಲ್ಲೆಗೆ ಈ ಬೆಟರ್‌ಮೆಂಟ್ ಚಾರ್ಜಸ್ ಹಾಕಬಾರದೆಂದು ಮತ್ತೊಮ್ಮೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸೆಲೆಕ್ಟ್ ಕಮಿಟಿಯಲ್ಲಿ ಆದರೂ ಅದೇರೀತಿಯಾಗಿ ತಿದ್ದುಪಡಿ ಮಾಡುವರೆಂದು ನಾನು ನಂಬುತ್ತೇನೆ ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—The closure motion has already been moved. I accept the closure motion and put it before the House. The question is:

"That the question be now put."

The motion was adopted.

*ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ಮೂರು ದಿನಗಳಿಂದ ಬಹು ದೀರ್ಘಕಾಲದವರೆಗೆ ಈ ಮಾನ್ಯ ಸಭೆಯ ಸದಸ್ಯರು ಈ ಮಸೂದೆಯ ಮೇಲೆ ವಿಶಲವಾಗಿ ಚರ್ಚೆ ನಡೆಸಿದ್ದಾರೆ. ಒಂದು ದೃಷ್ಟಿಯಿಂದ ಈ ಚರ್ಚೆ ಬಹಳ ಉಪಯುಕ್ತವಾದುದು ಎಂದು ನಾನು ಹೇಳಬಯಸುತ್ತೇನೆ. ಆದರೆ ಅನೇಕ ಅಂಶಗಳನ್ನು ಒಬ್ಬ ಮಾನ್ಯ ಸದಸ್ಯರು ಹೇಳಿದ್ದನ್ನೇ ಇನ್ನು ಕೆಲವರು ಒತ್ತಿ ಒತ್ತಿ ಹೇಳಿದ್ದಾರೆ. ಹೊಸದಾಗಿ ಯಾವದೇ ಅಂಶದ ಪ್ರಸ್ತಾಪನೆಯು ಆಗಿಲ್ಲ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿಕೊಡುವುದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಮೂರು ದಿನಗಳವರೆಗೆ ಚರ್ಚೆ ಮಾಡಿ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಎಲ್ಲಾ ಅಂಶಗಳನ್ನು ಸೆಲೆಕ್ಟ್ ಕಮಿಟಿಯ ಪರ್ಯಾಲೋಚನೆಗೆ ತೆಗೆದುಕೊಳ್ಳುವುದೆಂಬುದರಲ್ಲಿ ಏನೂ ಸಂದೇಹವಿಲ್ಲವೆಂದು ನಾನು ಭರವಸೆಯನ್ನು ಕೊಡಬಲ್ಲೆ. ಹಾಗೂ ಆ ಎಲ್ಲಾ ಸಲಹೆಗಳನ್ನೂ ನಾನು ಗುರುತಿಸಿಕೊಂಡಿದ್ದೇನೆ. ಸೆಲೆಕ್ಟ್ ಕಮಿಟಿಯ ಸದಸ್ಯರು ಎಲ್ಲ ಸಲಹೆಗಳನ್ನು ವಿವರವಾಗಿ ಚರ್ಚಿಸುವದಕ್ಕೆ ಒಂದು ಅವಕಾಶವಿದೆ, ಸಾಮಾನ್ಯವಾಗಿ ಪ್ರತಿಯೊಬ್ಬ ಸದಸ್ಯರೂ ಏನೇನು ಹೇಳಿರುವರೋ ಅವಕ್ಕೆಲ್ಲಾ ಈಗ ಉತ್ತರ ಕೊಡಬೇಕಾದ ಅಗತ್ಯವಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಯಾಕೆಂದರೆ ಮೊದಲನೆಯದಾಗಿ ಸೆಲೆಕ್ಟ್ ಕಮಿಟಿಯ ಮುಂದೆ ಈ ಎಲ್ಲ ಸಲಹೆಗಳೂ

[SRI Y. VEERAPPA in the Chair]

ಚರ್ಚೆಗೆ ಬರುತ್ತವೆ. ಎರಡನೆಯದಾಗಿ ಒಬ್ಬೊಬ್ಬರು ಬೇರೆಬೇರೆಯಾಗಿ ಹೇಳಿರುವುದನ್ನು 15 ಜನ ಸದಸ್ಯರುಗಳ ಹೆಸರುಗಳನ್ನು ಎತ್ತಿ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುವ ಅಗತ್ಯವಿಲ್ಲ. ಸಾಮಾನ್ಯವಾಗಿ ಎಲ್ಲ ಸದಸ್ಯರೂ ಹೇಳಿರತಕ್ಕಂಥ ವಿಷಯಗಳನ್ನು ಮತ್ತು ಉದ್ದೇಶಗಳನ್ನು ಸ್ಥೂಲವಾಗಿ ವಿಂಗಡಿಸಿಕೊಂಡು ನಾಲ್ಕು ಮಾತುಗಳಲ್ಲಿ ಉತ್ತರ ಕೊಡುತ್ತೇನೆ. ಮತ್ತು ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳಿಸುವುದಕ್ಕೆ ಒಪ್ಪಿಗೆ ಕೊಡುವುದಕ್ಕೆ ಈ ಸಭೆಯನ್ನು ಕೇಳಿಕೊಳ್ಳಬೇಕೆಂದು ಉದ್ದೇಶವನ್ನೂ ಸಹ ಇಟ್ಟುಕೊಂಡಿದ್ದೇನೆ.

ಮೈಸೂರು ಸಂಸ್ಥಾನದಲ್ಲಿ ಈ ಕಾನೂನು ಮೊದಲಿನಿಂದಲೂ ಇದೆ. ಹಾಗೂ ಇನ್ನು ಅನೇಕ ಭಾಗಗಳಲ್ಲಿಯೂ ಸಹ ಇದೆ ಎಂಬುದನ್ನು ಸದಸ್ಯರು ಒಪ್ಪಿಕೊಂಡಿದ್ದಾರೆ. ಕೆಲವು ಸದಸ್ಯರು ಮಾತ್ರ ಎಲ್ಲಾ ಕಡೆಯಲ್ಲೂ ಈ ಕಾನೂನು ಇಲ್ಲವೆಂದು ವಾದ ಮಾಡಿದ್ದಾರೆ. ಮುಖ್ಯವಾಗಿ ಶ್ರೀ ಷಂಶುದ್ದೀನ ಮತ್ತು ಶ್ರೀ ನರಸಿಂಹನ್ ಅವರು ಬೊಂಬಾಯಿ ಪ್ರಾಂತದಲ್ಲಿ ಇಲ್ಲವೆಂದು ಹೇಳಿದ್ದಾರೆ. ಆದರೆ ಬೊಂಬಾಯಿ ಸರಕಾರವು 1879ರ ಹಿಂದಿನ ಕಾಲದಿಂದ ಆ ಪ್ರದೇಶದಲ್ಲಿ ಬೆಟರ್‌ಮೆಂಟ್ ಚಾರ್ಜಸ್ ಹಾಕಿದ್ದಾರೆ. ಇದು ಇರಿಗೇಷನ್ ಆಕ್ಟಿನಲ್ಲಿ ಸೇರಿದೆ. ಬೇರೆ ಪ್ರತ್ಯೇಕ ಆಕ್ಟ್ ಈ ಸಂಬಂಧದಲ್ಲಿ ಮಾಡಿಲ್ಲ. ಆದರೆ ಬೆಟರ್‌ಮೆಂಟ್ ಚಾರ್ಜಸ್ ಹಾಕಿದ್ದಾರೆ. ಈ ಕಾನೂನು 1950ನೆಯ ಇಸವಿಯಲ್ಲಿ ಪುನಃ ತಿದ್ದುಪಡಿಯಾಗಿದೆ. ತಿದ್ದುಪಡಿಮಾಡಿದ ಆಕ್ಟಿನಲ್ಲಿ ಬೆಟರ್‌ಮೆಂಟ್ ಚಾರ್ಜಸ್ ಹಾಕಿದ್ದಾರೆ. Increase in value of land after the improvements are made ಎಂಬ ವಿವರವನ್ನು ಅದರಲ್ಲಿ ಕೊಟ್ಟಿದೆ. ಒಂದು ರೀತಿಯ ಬೇರೆ ಬೇರೆ ರೂಪದಲ್ಲಿ ಇದು ಆ ಪ್ರದೇಶದಲ್ಲಿ ಇದೆ. ಸಾರ್ವಜನಿಕ ಹಣದಿಂದ ನೀರಾವರಿ ಸೌಲಭ್ಯವನ್ನು ಒದಗಿಸಿದಲ್ಲಿ ಯಾರು ಹೆಚ್ಚು ಪ್ರಯೋಜನ ಹೊಂದಿದ್ದಾರೆಯೋ ಅವರು ಸರಕಾರಕ್ಕೆ ಸ್ವಲ್ಪ ಹಣ ಕೊಡುವ ತತ್ವ ಇದರಲ್ಲಿ ಇದೆ. ನೀರಾವರಿ ಯೋಜನೆಯಾದ ಪ್ರದೇಶದಲ್ಲಿ ಬೆಳೆಯು ಹೆಚ್ಚಾಗಿ ಬರುತ್ತದೆ.

(ಶ್ರೀ ಎಚ್. ಕೆ. ವೀರಣ್ಣಗೌಡ)

ಸಾಮಾನ್ಯವಾಗಿ ಬೆಳೆಯ ಅರ್ಧಭಾಗ ಬೆಟರಮೆಂಟ ಚಾರ್ಜಸ್ ಕೊಡುವ ಒಂದು ತತ್ವವನ್ನು ಅಂಗೀಕಾರ ಮಾಡಿದ್ದಾರೆ. ಸರಕಾರೀ ಯೋಜನೆಯಲ್ಲಿ ಹಣ investment ಮಾಡುವುದರಿಂದ capital ಹೋಗುತ್ತದೆ ಎಂಬ ಭಾವನೆಯಿಂದ ಕೆಲವು ಸ್ನೇಹಿತರು ಚರ್ಚೆ ಮಾಡಿದ್ದಾರೆ. ಈ ಬಗ್ಗೆ 4ನೆಯ ಕ್ಲಾಜಿನಲ್ಲಿ ಈ ರೀತಿಯಾಗಿ ಇದೆ.

> Clause 4: " Subject to such rules as may be prescribed, the Collector shall determine the contribution payable in respect of each of the lands mentioned in section 3......"

3ನೇ ಸೆಕ್ಷನ್‌ದಲ್ಲಿ ಬಿಟ್ಟು ಹೋದ ಎರಡು ಪದಗಳನ್ನು ಸೇರಿಸಿ ಓದಿದರೆ ಈ ರೀತಿಯಾಗಿ ಇದೆ.

> Section 3: "..........from the land-holder or holder of any land which, in its opinion, by the construction, restoration, expansion or alteration of any work by the Government is benefited."

ನೀರಾವರಿ ಯೋಜನೆಯಿಂದ ಜಮೀನಿನ ಬೆಲೆ ಜಾಸ್ತಿಯಾಗುತ್ತದೆ. ನಿಗದಿ ಮಾಡಿದ 500 ರೂಪಾಯಿಗಿಂತಲೂ ಜಾಸ್ತಿ ಕೊಡಲು ಜನರು ತಯಾರಾಗಿದ್ದಾರೆ. ಒಟ್ಟು ಯೋಜನೆಗೆ ಎಷ್ಟು ಲಕ್ಷ ರೂಪಾಯಿ ಖರ್ಚು ಬಂದಿದೆಯೋ ಅದರ ಮೇಲೆ ನಿರ್ಧರಿಸಲ ಬರುವುದಿಲ್ಲ ಶ್ರೀ ಚನ್ನಬಸಪ್ಪನವರು ಮಾಡಿದ ಸಲಹೆಯನ್ನು ಸೆಲೆಕ್ಟ್ ಕಮಿಟಿಯಲ್ಲಿ ಯೋಚನೆ ಮಾಡಲಾಗುವುದು.

ಇನ್ನೂ ಅನೇಕ ಸದಸ್ಯರು ಮಿನಿಮಮ್ ಇರಬಾರದು ಮತ್ತು ಮ್ಯಾಗ್ಜಿಮಮ್ 500ರೂಪಾಯಿ ಮೇಲೆ ಹೋಗಬಾರದು ಎಂದು ಸಲಹೆ ಮಾಡಿದ್ದಾರೆ. ಹಿಂದಿನ ಮೈಸೂರಿನಲ್ಲಿದ್ದ ಕಾನೂನಿನ ಪ್ರಕಾರ ಇದನ್ನು ಮಾಡಲಾಗಿದೆ. ಹಿಂದಿನ ಮೈಸೂರು ಸರಕಾರವು ನೇಮಕ ಮಾಡಿದ ಡಾಕ್ಟರ್ ನಾಗನಗೌಡ ಕಮಿಟಿಯು ಯೋಚನೆ ಮಾಡಿ 500 ರೂಪಾಯಿ ಮಿತಿಯನ್ನು ಗೊತ್ತುಮಾಡಲಾಗಿದೆ. ನಮಗೆ ಎಷ್ಟೋ ಅರ್ಜಿಗಳು ಬಂದಿವೆ. ನೀರು ಕೊಟ್ಟರೆ ಸಾಕು, 500 ರೂಪಾಯಿ ಏಕೆ, ಆರುನೂರು, ಏಳುನೂರು, ಎಂಟು ನೂರು ಬೇಕಾದರೆ ಕೊಡುತ್ತೇವೆಂದು ಅರ್ಜಿಗಳಲ್ಲಿ ಬರೆದುಕೊಂಡಿದ್ದಾರೆ. ಹೀಗೆ ಜನಗಳ ಆತುರ ನೋಡಿಕೊಂಡು, ಅವರ ಅಗತ್ಯ ನೋಡಿಕೊಂಡು ಹೀಗೆ ಅವರಿಂದ ಹಣವನ್ನು ವಸೂಲು ಮಾಡತಕ್ಕದ್ದು ನ್ಯಾಯವಲ್ಲ, ಸಾಮಾನ್ಯವಾಗಿ ಆಯಾಯಾ ಪ್ರದೇಶದ ಬೆಲೆ ಎಷ್ಟು ಏರುತ್ತದೆ ಅದನ್ನು ನೋಡಿಕೊಂಡು 500 ರೂಪಾಯಿಗಳ ಮೇಲೆ ವಸೂಲು ಮಾಡಬಾರದು ಎನ್ನುವ ತತ್ವವನ್ನು ಸರಕಾರದವರು ಒಪ್ಪಿದ್ದಾರೆ. ಈ ತತ್ವವನ್ನು ಹಳೆಯ ಮೈಸೂರಿನಲ್ಲೂ ಸಹ, ಒಪ್ಪಿದ್ದಾರೆ. ಇದನ್ನೆಲ್ಲ ಸೆಲೆಕ್ಟ್ ಕಮಿಟಿಯವರು ಯೋಚನೆಮಾಡಬೇಕು. ನನಗೆ ಜ್ಞಾಪಕವಿರುವಂತೆ 50 ರೂಪಾಯಿಗಳಿಗೆ ಕಡಿಮೆ ಮತ್ತು 500 ರೂಪಾಯಿಗಳಿಗೆ ಮೇಲ್ಪಟ್ಟಂತೆ ಇದೆ; ಇರುವ ನಿದರ್ಶನಗಳನ್ನು ನಾನು ನೋಡಿಲ್ಲ. ಈ ವಿವರಗಳನ್ನೆಲ್ಲ ಸೆಲೆಕ್ಟ್ ಕಮಿಟಿಯವರು ಸ್ವಲ್ಪ ಯೋಚನೆ ಮಾಡಬೇಕು ಮತ್ತು ಈ ವಾಟರು ರೇಟನ್ನು ನಿಗದಿ ಮಾಡಬೇಕು. ಆಗಲೇ ಈ ವಿಷಯದಲ್ಲಿ ವಿವರಗಳನ್ನೆಲ್ಲ ಮಾನ್ಯ ಶ್ರೀ ಚನ್ನಬಸಪ್ಪನವರು ಚೆನ್ನಾಗಿ ಕೊಟ್ಟಿದ್ದಾರೆ. ಭತ್ತಕ್ಕೆ, ಖುಷ್ಕಿ ಬೆಳೆಗೆ, ಕಬ್ಬಿಗೆ ಮತ್ತು ಮೆಣಸಿನಕಾಯಿ ಬೆಳೆಗೆ ಹೀಗೆ ಎಲ್ಲದಕ್ಕೂ ನೀರು ಬೇಕು. ಸುಮಾರು 15 ತಿಂಗಳುಗಳ ಕಾಲ ಕಬ್ಬಿಗೆ ನೀರು ಬೇಕಾಗುತ್ತದೆ. ಭತ್ತಕ್ಕೆ ಸುಮಾರು ಆರು ತಿಂಗಳು ಕಾಲ ಬೇಕಾಗುತ್ತದೆ. ಖುಷ್ಕಿ ಬೆಳೆಗಳಿಗೆ ಸುಮಾರು ಮೂರು ಅಥವಾ ನಾಲ್ಕು ಹದ ಮಳೆಯಾದರೆ ಸಾಕಾಗುತ್ತದೆ. ಡ್ರೈ ಏರಿಯಾಗಳಲ್ಲಿ ಒಂದು ರೀತಿಯಿರುತ್ತದೆ. ಈಗ ಘಟಪ್ರಭಾ ಕಾಲುವೆಯಿಂದ 40 ಮೈಲಿಗಳ ನಾಲೆಯಾಗಿದೆ. ಆದರೆ ನೀರು ಬಿಡುವುದಕ್ಕೆ ಅಲ್ಲಿ ಜಮೀನು ಮಟ್ಟಮಾಡಿಲ್ಲ. ಅದನ್ನು ಏಕೆ ಮಟ್ಟಮಾಡಲಿಲ್ಲ ಎಂದು ನಾನು ಹಿಂದೆ ಅಲ್ಲಿಗೆ ಹೋಗಿದ್ದಾಗ ಕೇಳಿದರೆ ಅದನ್ನು ಏಕೆ ಮಟ್ಟಮಾಡಬೇಕು ಎಂದು ಕೇಳಿದರು. ಅಗ ಈ ಕಾಲುವೆ ಕಡೆಯಿಂದ ನೀರನ್ನು ಹಾಯಿಸಲು ಸರಿಯಾದ ಓಟವಿರಬೇಕಾದರೆ ಜಮೀನು ಮಟ್ಟವಾಗಿರಬೇಕು. ತರಿ ವ್ಯವಸಾಯಕ್ಕೆ ಜಮೀನು ಮಟ್ಟವಾಗಿದ್ದರೆ ನೀರಿನ ಓಟ ಸರಿಯಾಗಿರುತ್ತದೆ. ಈಗ ಗೋಧಿ, ಹತ್ತಿ ಜೋಳ, ಇವುಗಳ ವ್ಯವಸಾಯಕ್ಕೆ ನೀರು ಸ್ವಲ್ಪವೇ ಇದ್ದರೂ ಸಾಕು. ಆದರೆ ಕೆಲವು ಕಡೆ ವ್ಯವಸಾಯಕ್ಕಾಗಿ ಹೆಚ್ಚು ಭೂಮಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಷ್ಟು ನೀರಿದೆಯೋ ಅದರಂತೆ ಕೆಲವು ಪ್ರದೇಶಗಳಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಹಳೆಯ ಮೈಸೂರಿನಲ್ಲಿ 'perennial supply of water' ಎಂದರೆ, ಯಾವಾಗಲೂ ನೀರು ಪೈರಿನ ಮೇಲೆ ಎರಡು-ಮೂರು ಅಂಗುಲಗಳಷ್ಟು ನಿಲ್ಲುತ್ತಿತ್ತು. ಹಾಗೆ ಕೆಲವು ಪೈರುಗಳಿಗೆ ನೀರು ನಿಲ್ಲಬೇಕಾದ ಅವಶ್ಯಕತೆಯಿಲ್ಲ. ಇದರಲ್ಲಿ ಪ್ರಾಂತಪ್ರಾಂತಕ್ಕೆ ವ್ಯತ್ಯಾಸವಿದೆ. ಒಂದು ಬೆಳೆಗೂ ಇನ್ನೊಂದು ಬೆಳೆಗೂ ಬೇಕಾದಷ್ಟು ವ್ಯತ್ಯಾಸವಿದೆ. ಈ ವಿವರಗಳನ್ನೆಲ್ಲ ಕಾನೂನಿನಲ್ಲಿ ಅಡಕ ಮಾಡುವುದು ಅಷ್ಟು ಸೂಕ್ತವಾದುದಲ್ಲ. ಆಯಾ ಪ್ರದೇಶಗಳಲ್ಲಿರುವ ಮುಖ್ಯ ಅಂಶಗಳನ್ನು ಒಂದೇ ಕಾನೂನಿನಲ್ಲಿ ಅನ್ವಯಮಾಡುವುದಕ್ಕಾಗಿಯೇ ನಾವು ಒಂದು ಆಕ್ಟನ್ನು ಮಾಡುತ್ತಿದ್ದೇವೆ. ಈ ಆಕ್ಟು ಎನ್ನುವುದು ಒಂದು ತತ್ವವನ್ನು ಅಥವಾ ನೀತಿಯನ್ನು ತೋರಿಸುತ್ತದೆ. ಯಾವ ನೀತಿಯನ್ನು ಅನುಸರಿಸಿ ಆಡಳಿತವನ್ನು ನಡೆಸಬೇಕು, ಆ ನೀತಿಯನ್ನು ಅನುಸರಿಸುವುದಕ್ಕೆ ಅನೇಕ ಸಲಹೆಗಳು, ಸೂಚನೆಗಳು, ಕಾರ್ಯಕ್ರಮಗಳು, ಇವನ್ನು ರೂಲ್ಸಿನಲ್ಲಿ ನಿರ್ಧಾರಮಾಡಬೇಕು. ಡೆಪ್ಯುಟೀ ಕಮೀಷನರವರು ಫೈನಲ್ ಆಗಿ ತೀರ್ಮಾನಮಾಡಿದ ಮೇಲೆ ಅಪೀಲೇ ಇಲ್ಲ, ಮತ್ತು ಅವರು ಯದ್ವಾತದ್ವಾ ಕಣ್ಣುಮುಚ್ಚಿಕೊಂಡು ಸೈನುಮಾಡಿಬಿಡುತ್ತಾರೆ, ಎಂದು ಹಾಗೆಲ್ಲ ಕೆಲವು ಸದಸ್ಯರು ಟೀಕೆ ಮಾಡಿದ್ದಾರೆ. ಹಾಗಾಗುವುದಿಲ್ಲ. ಎಲ್ಲೋ ಒಂದು ಡೆಪ್ಯುಟೀಕಮಿಷನರ ಆಫೀಸಿನಲ್ಲಿ ಯಾರೋ ಒಬ್ಬ ಗುಮಾಸ್ತರು ತಪ್ಪುಮಾಡಿದರೆಂದರೆ ಈ ಅಧಿಕಾರಿಗಳು ಕಣ್ಣುಮುಚ್ಚಿಕೊಂಡು ರುಜು ಹಾಕುವುದಿಲ್ಲ. ಯಾವಾಗಲೂ ರೂಲ್ಸುಗಳನ್ನು ಮಾಡುವಾಗ, ತನಿಖೆ ಮಾಡಬೇಕು, ಸುತ್ತಮುತ್ತಲ ತಕರಾರುಗಳನ್ನು ಕೇಳಬೇಕು, ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಕ್ರಯಪತ್ರಗಳು ಬರುತ್ತವೆ, ಅವು ಸರಿಯಾಗಿವೆಯೋ ಇಲ್ಲವೇ ಎಂಬುದನ್ನು ತಿಳಿಯಬೇಕು. ಅನೇಕ ಅಂಶಗಳು ವಿವರವಾಗಿ ಗೆಜೆಟ್ಟಿನಲ್ಲಿ ಬಂದರೂ ತಿಳಿಯುವುದಿಲ್ಲ ಎನ್ನುವುದಾದರೆ ಆಯಾಯಾ ಪ್ರದೇಶಗಳಲ್ಲಿರುವ ಪತ್ರಿಕೆಗಳಿಗೆ ಹಾಕಿಸುವ ಕೆಲಸವನ್ನು ಕೈಗೊಳ್ಳಬಹುದು. ನೋಟಿಫಿಕೇಷನ್ನನು ಹಳ್ಳಿಹಳ್ಳಿಗೂ

ಡಂಗುರ ಹೊಡೆಯಿಸಿ ಯಾವರೀತಿಯಾಗಿ ರೈತರುಗಳಿಂದ ಅಹವಾಲುಗಳನ್ನು ಸ್ವೀಕರಿಸಬಹುದೋ ಆ ರೀತಿಯಾದ ಕ್ರಮಗಳನ್ನು ಕೈಗೊಳ್ಳಬಹುದು. ಇವನ್ನೆಲ್ಲ ನಿಯಮಗಳನ್ನು ಮಾಡುವಾಗ ಯೋಚಿಸಿ ಮಾಡಬೇಕಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—1945–46ಕ್ಕೆ ಮುಂಚೆ ಧಾರಣೆವಾಸಿಗಳು ಕಡಿಮೆಇದ್ದುವು. ಜಮೀನುಗಳನ್ನು ಕೊಂಡುಕೊಳ್ಳುತ್ತಿದ್ದರು. ಈಗ ಧಾರಣೆವಾಸಿಗಳು ಜಾಸ್ತಿಯಾಗಿರುವುದರಿಂದ ಜಮೀನಿನ ಬೆಲೆಯೂ ಜಾಸ್ತಿಯಾಗಿದೆ. ಅವುಗಳನ್ನು ಮನಸ್ಸಿಗೆ ಬಂದಹಾಗೆ ಮಾರುತ್ತಿದ್ದಾರೆ. ಅದರ ಮೇಲೆ ಹೇಳಿದ್ದು.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಜಮೀನಿನ ಬೆಲೆಯ ವಿಚಾರ ಹೇಳಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ತಾವು ಹೇಳಿದಿರಿ ಡೆಪ್ಯುಟೀ ಕಮೀಷನರು ಸರಿಯಾಗಿ ಆರ್ಡರುಮಾಡುತ್ತಾರೆ ಎಂದು. ಹಾಗೆ ಮಾಡಿಲ್ಲ. ಬೇಕಾದರೆ ರುಜುವಾತು ಕೊಡುತ್ತೇನೆ. ಗುಬ್ಬಿ ತಾಲ್ಲೂಕಿನಲ್ಲಿರುವ ಇರಕಸಂದ್ರ ಕೆರೆಯ ವಿಷಯದಲ್ಲಿ ಎಷ್ಟು ಹೇಳಿದರೂ ಸರಿಯಾಗಿ ರೈತರುಗಳನ್ನು ವಿಚಾರಿಸದೇ ಆರ್ಡರು ಮಾಡಿದ್ದಾರೆ. ಇದನ್ನು ಬೇಕಾದರೆ ತಾವು ವಿಚಾರ ಮಾಡಬಹುದು.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಹಳೆಯ ಮೈಸೂರು ಕಾನೂನಿನ ಮೇಲೆ ತಾವು ಆಕ್ಷೇಪಣೆಗಳನ್ನು ಎತ್ತುತ್ತಿದ್ದೀರಿ.

ಶ್ರೀ ಜಿ. ಎನ್. ಪುಟ್ಟಣ್ಣ.—ನಾನು ಆಕ್ಷೇಪಣೆಗಳನ್ನು ಮಾಡುತ್ತಿಲ್ಲ ಸ್ವಾಮೀ, ನಮ್ಮ ಕಷ್ಟ ಏನಿದೆ ಅದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಹಿಂದಿನ ಸರಕಾರ ಮಾಡಿದ್ದ ಕಾನೂನಿನ ವಿಚಾರ ಇಲ್ಲಿ ಈಗ ಹೇಳಿದರೆ ಹೇಗೆ? ಹೊಸ ಕಾನೂನೇ ಆಗಿಲ್ಲ. ಹಳೆಯ ಕಾನೂನನ್ನು ಅನುಸರಿಸಿ ಹೀಗೆ ಆಗಿದೆ ಎಂದು ಹೇಳಿದರೆ ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಕಾನೂನಿನಲ್ಲೇ ಇದನ್ನೆಲ್ಲ ನಿರ್ಬಂಧವಮಾಡಬೇಕು. ಒಂದು ಪ್ರಿನ್ಸಿಪಲ್ಲನ್ನು ಆಚರಣೆಗೆ ತರುವಾಗ ಯಾವ ರೀತಿಯಾದ ಕಾರ್ಯಕ್ರಮವನ್ನು ತರಬೇಕು ಎಂಬುದನ್ನೆಲ್ಲ ರೂಲ್ಸುಗಳಲ್ಲಿ ನಿರ್ಧಾರಮಾಡಿ ಆ ರೂಲ್ಸುಗಳನ್ನೆಲ್ಲ ಈ ಸಭೆಯ ಮುಂದೆ ಇಡುತ್ತೇನೆ. ಮನಸ್ಸಿನಲ್ಲಿ ಬಂದಹಾಗೆ ಕಾರ್ಯಾಚರಣೆ ಮಾಡುವುದಕ್ಕಾಗುವುದಿಲ್ಲ. ಅಷ್ಟು ಆದಮೇಲೆ ಅದಕ್ಕೆ ವಿರೋಧವಿಲ್ಲದ ರೀತಿಯಲ್ಲಿ ನಿಯಮನಿಬಂಧನೆಗಳನ್ನು ಈ ಸಭೆಯ ಮುಂದೆ ಇಡಬೇಕಾಗುತ್ತದೆ. ಆಗ ನಿಮ್ಮ ಸಲಹೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿದೆ. ಪ್ರತಿಯೊಂದು ಅಂಶವನ್ನೂ ಕಾನೂನಿನಲ್ಲಿಯೇ ಅಡಕಮಾಡುವುದು ಅಷ್ಟು ಸೂಕ್ತವಲ್ಲ. ಇಷ್ಟರಮೇಲೆ ಯಾವಯಾವ ಅಂಶಗಳ ಮೇಲೆ ಸೆಲೆಕ್ಟು ಕಮಿಟಿಯವರು ತೀರ್ಮಾನಮಾಡುತ್ತಾರೋ ಅವುಗಳ ಮೇಲೆ ಇವನ್ನೆಲ್ಲ ನಿರ್ಧರಿಸಬೇಕು.

ಶ್ರೀ ಜಿ. ವೆಂಕಟೇಗೌಡ.—ಅಪಲೆಟ್ಟು ಅಥಾರಿಟಿ ಪ್ರಿಸ್ಕ್ರೈಬು ಮಾಡುವುದಿಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಕಲೆಕ್ಟರುಗಳು ನೋಡಿಕೊಳ್ಳುತ್ತಾರೆ. ಕಾನೂನಾಗಿ ಇನ್ನೂ ನಮ್ಮ ಮುಂದೆ ಬರುವುದಕ್ಕೆ ಅವಕಾಶವಿದೆ. ಅದರಿಂದ ಈಗಲೇ ಯಾವುದನ್ನೂ ನಾನು ಹೇಳುವುದಕ್ಕೆ ಆಗುವುದಿಲ್ಲ. ಸೆಲೆಕ್ಟ್ ಕಮಿಟಿ ಮುಂದೆ ಇದನ್ನೆಲ್ಲ ವಿವರವಾಗಿ ಚರ್ಚೆಮಾಡಬೇಕು.

ನಮ್ಮ ಸ್ನೇಹಿತರಾದ ಶ್ರೀಮಾನ್ ನರಸಿಂಹನ್ ಅವರು ಸಾಂಪ್ರದಾಯಿಕವಾಗಿ ಕೆಲವು ಪದಗಳು ಇಂಗ್ಲೀಷು ಭಾಷೆಯಿಂದ ತರ್ಜುಮೆ ಮಾಡಿದಾಗ ಸರಿಯಾಗಿಲ್ಲ ಎಂದು, hair splitting translation ನಂತೆ ಇದೆಎಂದು ಹೇಳಿದರು. ಸಾಮಾನ್ಯವಾಗಿ ಇಂಗ್ಲೀಷು ಭಾಷೆಯೇ ಒಂದುರೀತಿಯಾಗಿದೆ. ಉದಾಹರಣೆಗೆ ಈಗ ಒಬ್ಬರ ಹೆಸರು ಕೆಂಚೇಗೌಡ ಎಂದಿದ್ದರೆ 'ರೆಡ್ ಗೌಡ' ಎಂದು ಇಂಗ್ಲೀಷಿಗೆ ಭಾಷಾಂತರಿಸಿದರೆ ಚೆನ್ನಾಗಿರುತ್ತದೆಯೇ? ಸಾಮಾನ್ಯವಾಗಿ ಇಲ್ಲಿ ಬಳಕೆಯಲ್ಲಿರುವ ಶಬ್ದಗಳನ್ನು ಅಥವಾ ಪದಗಳನ್ನು ಕಾನೂನಿನಲ್ಲಿ ಉಪಯೋಗಿಸಬೇಕಾಗಿದೆ. ನಮ್ಮ ಹಿಂದಿನ ಸರಕಾರದಲ್ಲಿರಲಿಲ್ಲ, ಬೊಂಬಾಯಿ ಸರಕಾರದಲ್ಲಿರಲಿಲ್ಲ, ಮದರಾಸು ಸರಕಾರದಲ್ಲಿರಲಿಲ್ಲ ಎಂದು ಹೇಳುವುದು ಸರಿಯಾದುದಲ್ಲ. ಸಾಮಾನ್ಯವಾಗಿ ಇದನ್ನೆಲ್ಲ ಬಹಳ ದಿವಸಗಳಿಂದ universally accepted principle ಮೇಲೆ ಮಾಡಲಾಗಿದೆ. ನಾವೇನೂ ಈಗ ಹಂಗೇರಿ, ರಷ್ಯಾ ಅಥವಾ ಇನ್ನಿತರ ದೇಶಗಳನ್ನು ಅನುಸರಿಸುತ್ತಿಲ್ಲ. ಈಗ ಹೆಸರು ಶ್ರೀ ನರಸಿಂಹನ್ ಎಂದಿದ್ದರೆ ಅದನ್ನು ವರ್ಬಲ್‌ಆಗಿ ಭಾಷಾಂತರಿಸುವಾಗ "Lion Man" ಎಂದು ಹಾಗೆ ಹೇಳಿದರೆ ಅರ್ಥವಾಗುವುದಿಲ್ಲ. ಆದುದರಿಂದ ಸರಿಯಾಗಿ ಇವುಗಳನ್ನೆಲ್ಲ ಪರಿಶೀಲನೆ ಮಾಡಿ "Hair splitting translation" ರೀತಿ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—"ಭೂಧಾರಕ" ಎಂಬ ಒಂದು ಪದ ಕನ್ನಡದ ಬಿಲ್ಲಿನಲ್ಲಿ ಬಂದಿದ್ದರ ಮೇಲೆ ಅದನ್ನು ವಿರೋಧಮಾಡಿದ್ದಾರೆ ಅಷ್ಟೆ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಹೌದು. ಇಲ್ಲಿ ಏನಾಗಿದೆ ಎಂದರೆ, "ಒಲ್ಲದ ಗಂಡನಿಗೆ ಮೊಸರನ್ನದಲ್ಲಿ ಕಲ್ಲು ಸಿಕ್ಕಿತು" ಎಂದಹಾಗೆ ಆಗಿದೆ. ಇಷ್ಟನ್ನು ಹೇಳುತ್ತೇನೆ, ಯಾವಾಗಲೂ ವ್ಯಾಖ್ಯಾನ ಮಾಡುವಾಗ ಸ್ವಲ್ಪ ಮಿತಿ ಇರಬೇಕು. ಮಿತಿಯಿಲ್ಲದೆ ಮಾತನಾಡುತ್ತಹೋದರೆ ಅದಕ್ಕೆ ಮಿತಿಯೇ ಇರುವುದಿಲ್ಲ. ಮತ್ತು ಇದರಲ್ಲೇ ಡ್ರಾಫ್ಟು ಮಾಡುವಾಗ ಏನೋ ಸ್ವಲ್ಪ ದೋಷಗಳು ಬಂದಿರಬಹುದು. ದೋಷಗಳಿಲ್ಲದೆ ಯಾವ ಕಾನೂನೂ ಇರುವುದಿಲ್ಲ. ಅದನ್ನು ಚರ್ಚೆಗಾಗಿ ಸೆಲೆಕ್ಟು ಕಮಿಟಿಗೆ ಕಳುಹಿಸುವುದಾದರೂ ಏಕೆ? ಆಮೇಲೆ ಇಲ್ಲಿಗೆ ತಂದು ಪುನಃ ಸಾಧಾರಣ ಚರ್ಚೆಗೆ ಇಡುವುದು ಏಕೆ? ಮತ್ತು Clause by clause ಟೀಕೆಮಾಡುವುದೇಕೆ? ಸಾಮಾನ್ಯವಾಗಿ ನಮ್ಮ ಸ್ನೇಹಿತರು ಕಾನೂನು ಓದಿಕೊಂಡರೆ, ಯಾವಾಗಲೂ ಒಂದು ಟೀಕೆಯಿಲ್ಲದೆ ಕಾನೂನು ಸರಿಹೋಗುವುದಿಲ್ಲ. ಹೆಸರು ತಪ್ಪೆಂದು ಮಸೂದೆಯನ್ನೇ ವಿರೋಧಿಸುವ ಪಕ್ಷಕ್ಕೆ ಜನರಲ್ ಡಿಸ್‌ಕಷನ್ನಿಗೆ ಅವಕಾಶವೇಕೆ? ಆಮೇಲೆ ಕ್ಲಾಸಿನ ಮೇಲೆ ಚರ್ಚೆ ಏಕೆ? ಹೀಗೆ ಆ ರೀತಿಯಾದ ವಾದಮಾಡುವುದರಲ್ಲಿ ಅರ್ಥವಿಲ್ಲವೆಂದು ಇದರ ಉದ್ದೇಶವಲ್ಲ.

12 NOON.

ಆದ್ದರಿಂದ ನಿಮಗೆ ಶಕ್ತಿಯಿಲ್ಲ, ರಾಜ್ಯಭಾರ ಮಾಡುವುದಕ್ಕೆ ಬರುವುದಿಲ್ಲ, ನಿಶ್ಯಕ್ತರು ಎಂದು ಆಕ್ಷೇಪಣೆ ಮಾಡಬಹುದು.

ಶ್ರೀ ಯು. ಎಂ. ಮಾದಪ್ಪ.—ತಾವು ಸರಿಯಾಗಿ ಇದನ್ನು ಮಾಡಿದ್ದರೆ ಸೆಲೆಕ್ಟ್ ಕಮಿಟಿಗೆ ಕಳುಹಿಸುವ ಪ್ರಮೇಯವೇ ಇರುವುದಿಲ್ಲ. ಇಷ್ಟೊಂದು ಚರ್ಚೆಯೂ ಆಗುತ್ತಿರಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಒಳ್ಳೆಯ ಪ್ರಮೇಯ? ಇರು ಐದು ವರ್ಷಗಳಿಗೊಮ್ಮೆ ಪ್ರಜೆಗಳಿಂದ ಓಟುಗಳಿಸಿ ಆರಿಸಿ ಅಸೆಂಬ್ಲಿಗೆ ಬರುತ್ತಾರೆ. ಅಂತಹವರು

(ಶ್ರೀ ಎಚ್. ಕೆ. ವೀರಣ್ಣಗೌಡ)
ಅನೇಕ ಸಲಹೆಗಳನ್ನು ಕೊಡುತ್ತಾರೆ. ಸರ್ಕಾರದವರು ದೀರ್ಘಾಲೋಚನೆಮಾಡಿ ಅನುಭವದ ಮೇಲೆ ಮಾಡಿರುವ ಮಸೂದೆ ಇದು. ಇನ್ನೂ ಡ್ರಾಫ್ಟ್ ಫಾರಂನಲ್ಲಿದೆ. ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅವನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶವಿದೆ. ನನಗೆ ಹೆಚ್ಚು ಕಾಲ ತೆಗೆದುಕೊಳ್ಳಲು ಇಷ್ಟವಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಿಮಗೆ ಸಾಕಾಗಿದ್ದರೆ ನಮಗೂ ಸಾಕಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಮಾನ್ಯ ಎದುರುಪಕ್ಷದ ನಾಯಕರು ನೀರನ್ನು ನೇರವಾಗಿ ಬಿಟ್ಟರೆ ತೆರಿಗೆಯನ್ನು ಹಾಕಿ ಎಂದು ಹೇಳಿದರು.

ಶ್ರೀ ಯು. ಎಂ. ಮಾದಪ್ಪ.—ನೀರು ಬಿಡುತ್ತಿದ್ದರೆ ಹೆಚ್ಚಿಗೆ ಬೆಳೆ ಬರುವುದಿಲ್ಲ. ಕಾಸ್ಟ್ ಆಫ್ ಪ್ರೊಡಕ್ಷನ್ ಮಾತ್ರ ಹೆಚ್ಚಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಗೊಬ್ಬರವನ್ನೂ ಹಾಕಬೇಕು. ನೀರೂ ಬೇಕು. ಅದರ ಮೇಲೆ ನಾನು ಜಗಳ ಮಾಡುವುದಿಲ್ಲ. ಹೀಗೆ ತಪ್ಪು ಕಂಡುಹಿಡಿಯುವ ಉದ್ದೇಶ ನಮಗಿಲ್ಲ. ಏನೋ ಭಂಡಾರ ತುಂಬಿಕೊಳ್ಳಬೇಕು ಎಂದು ಬಡರೈತರಿಗೆ ತೊಂದರೆ ಕೊಡುವ ಉದ್ದೇಶವಿಲ್ಲ. ಎಲ್ಲಾ ರೈತರ ಅನುಕೂಲವೂ ಆಗಬೇಕು. ಇದು ಸಾಮಾನ್ಯವಾದ ತೆರಿಗೆ. ಒಂದೊಂದು ಪ್ರಾಂತದ ಕೋಟ್ಯಾಂತರ ಜನರು ಕೊಡುವ ಕಂದಾಯದ ಹಣವನ್ನು ಸಾವಿರಾರು ಜನಗಳಿಗೆ ಅನ್ವಯಿಸುವಹಾಗೆ ಉಪಯೋಗಿಸಬೇಕು. ಬಡವರು ಈ ತೆರಿಗೆಯನ್ನು ಕೊಡುವುದಿಲ್ಲ. ನಮ್ಮ ಬಯಲು ಪ್ರದೇಶದಲ್ಲಿ ಹತ್ತು ಎಕರೆ ಮೂರು ಎಕರೆ ಜಮೀನಿದ್ದರೆ ಅಂತಹವರು ಕೊಡಬೇಕು ಎಂದು ಇದರಲ್ಲಿ ಹೇಳಲಿಲ್ಲ. ಜನರಲ್ ಫಂಡಿನಿಂದ ಕೆರೆ, ಕೋಡಿಗಳನ್ನು ಕಟ್ಟಬೇಕು. ಆಗ ಅವನ ಬಡತನ ಹೋಗುತ್ತದೆ.

ಶ್ರೀ ಜಿ. ಎಲ್. ಪುಟ್ಟಣ್ಣ.—ಬಡರೈತರು, ಬುದ್ಧಿ ಇಲ್ಲದೆ ಇರುವವರು. ಆದ್ದರಿಂದ ಆಫೀಸರಿಗೆ ಈಗಿರತಕ್ಕ ಪವರನ್ನು ಕೊಡಬಾರದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಬಡವರು ಎಂದರೆ ತಿಳಿವಳಿಕೆ ಇಲ್ಲದವರು ಎಂದು ಡಿಕ್ಷನರಿಯಲ್ಲಿಯೂ ಇಲ್ಲ. ಜನರಲ್ ಟ್ಯಾಕ್ಸ್ ಹಾಕಿ ಅಧಿಕಾರಿಗಳಿಂದ ಜನಗಳನ್ನು ಶೋಷಣೆಮಾಡುವ ಹಾಗೆ ಅರ್ಥಬರುವ ರೀತಿಯಲ್ಲಿ ಈ ಸಭೆಯಲ್ಲಿ ಚರ್ಚೆಯಾಗಿದೆ. ಕೆಲವು ಪ್ರಾಂತದ ಜನರು ಯಾವರೀತಿ ಪ್ರಯೋಜನ ಹೊಂದುತ್ತಿದ್ದಾರೋ ಆ ರೀತಿಯಾದ ಸಹಾಯವನ್ನು ಇತರ ಕಡೆಯೂ ಕೊಡಬೇಕು. ಕೆಲವು ಕಡೆ ಕಬ್ಬು, ಬತ್ತ ಮೆಣಸಿನಕಾಯಿ ಬೆಳೆಯುತ್ತಾರೆ. ಕೆಲವು ಕಡೆ ಬರೀ ಬತ್ತ ಬೆಳೆಯುತ್ತಾರೆ, ಘಟಪ್ರಭಾ ಪ್ರಾಂತದಲ್ಲಿ ನಾಲ್ಕು—ಆರು ಹದ ನೀರು ಕೊಟ್ಟರೆ ವರ್ಷದ ಬೆಳೆ ಆಯಿತು. ಆಯಾ ಜಿಲ್ಲೆಯ ಕಲೆಕ್ಟರು ಅದನ್ನು ವಿಮರ್ಶೆಮಾಡಿ ತೀರ್ಮಾನಮಾಡಬೇಕು. ಆದ್ದರಿಂದ ಭಂಡಾರ ತುಂಬಿಸಿಕೊಳ್ಳುವ ಉದ್ದೇಶ ನಮಗಿಲ್ಲ. ಕೆಲವು ಮಾನ್ಯ ಸದಸ್ಯರು, ಇದು ಕೆಲವರು ಮಾತ್ರ ಕೊಡುವ ಟ್ಯಾಕ್ಸ್, ಇದರಿಂದ ಕೆಲವರು ಪ್ರಯೋಜನ ಹೊಂದುತ್ತಾರೆ ಎಂದು ಹೇಳಿದರು. ಇದು ಬಡವರು, ಪುಣ್ಯವಂತರೆಂದು ಕೊಡುವ ಟ್ಯಾಕ್ಸ್ ಅಲ್ಲ. ನಾನು ಅನೇಕ ಸಾರಿ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ. ಸರ್ಕಾರದವರು ಎಂದರೆ ನೀವು. ನಾವಲ್ಲ. 208 ಜನರನ್ನು ಸರ್ಕಾರದ ಕಾರ್ಯ ಮಾಡುವುದಕ್ಕೆ ಪ್ರಜೆಗಳು ನೇಮಿಸಿದ್ದಾರೆ. ಅದಕ್ಕೆ ಕಾನೂನು ಮಾಡಿಕೊಡಿ, ಹಣ ಒದಗಿಸಿ ಎಂದು ನಿಮ್ಮ ಮುಂದೆ ಹೇಳುತ್ತೇವೆ. ನಾವೇನು ದೋಚಿಕೊಂಡುಹೋಗುತ್ತೇವೆಯೇ? ನಿಮ್ಮದು ಕಾನೂನು. ನೀವು ಹೇಳಿದ ಪ್ರಕಾರ ರಾಜ್ಯಾಡಳಿತ ಮಾಡಲು ನಾವಿರುವುದು. ಕಾನೂನು ಮಾಡುವುದು ನಿಮ್ಮ ಕರ್ತವ್ಯ. ಸರ್ಕಾರ ನಿಮ್ಮದು ನಮ್ಮದು ಎಂದು ಚರ್ಚೆಮಾಡುವುದು ಸೂಕ್ತವಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಕೆಂಚಪ್ಪ.—ತಾವು ಹೇಳಿದಿರಿ 500 ರೂಪಾಯಿಗಳಿಗಿಂತ ಮೇಲ್ಪಟ್ಟು ಕಾಂಟ್ರಿಬ್ಯೂಷನ್ ಮೊಬಲಗು ತೆಗೆದುಕೊಳ್ಳುವುದಕ್ಕೆ ಕಾನೂನುಪ್ರಕಾರ ರಹದಾರಿ ಇದೆ ಎಂದು ನಾವು ಇಲ್ಲಿ ನೋಡಿದರೆ ಆ ಪ್ರಕಾರ ಇಲ್ಲವೇಇಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಿಂದೆ ಮೈಸೂರು ರಾಜ್ಯದಲ್ಲಿ ಕೆರೆಕಟ್ಟಲು 800 ರೂಪಾಯಿಗಳವರೆಗೂ ಕೊಡುತ್ತಿದ್ದರು. ಹೀಗೆ ಜನಗಳ ಆತುರ ನೋಡಿಕೊಂಡು ಸರ್ಕಾರದವರು ಹೆಚ್ಚಿಗೆ ಹಣ ರೈತರಿಂದ ತೆಗೆದುಕೊಳ್ಳುವುದು ಸರಿಯಲ್ಲ. ನೀರಾವರಿ ಅನುಕೂಲ ಒದಗಿದರೆ ಬತ್ತದ ಬೆಳೆ ಹೆಚ್ಚುತ್ತದೆ ಎಂದು, 1,000 ರೂಪಾಯಿಗಳವರೆಗೆ ಜನರು ಕೊಡುವುದಕ್ಕೆ ತಯಾರಿದ್ದರೂ, 500 ರೂಪಾಯಿಗಳ ಪರಿಮಿತಿ ಇರಬೇಕೆಂದು ಇತ್ತು. 500 ರೂಪಾಯಿಗಳಿಗಿಂತ ಜಾಸ್ತಿ ಮಾಡಬಾರದು ಎಂದು ಸಂಬಂಧಪಟ್ಟ ಸಮಿತಿಯವರು ವರದಿ ಕಳುಹಿಸಿದರು. ಹಿಂದಿನ ಸರ್ಕಾರದವರು ಅದನ್ನು ಅಂಗೀಕಾರಮಾಡಿದರು. ಕಾನೂನು ಪ್ರಕಾರ 500 ರೂಪಾಯಿಗಳಿಗಿಂತ ಹೆಚ್ಚಿಗೆ ನಿಗದಿಮಾಡುವ ಹಾಗಿಲ್ಲ. ಹಿಂದಿನ ಮೈಸೂರಿನಲ್ಲಿ ಟ್ಯಾಂಕ್ ಇರಿಗೇಷನ್ ಕಾನೂನು ಪ್ರಕಾರ 200 ರೂಪಾಯಿಗಳಿಗಿಂತ ಹೆಚ್ಚಿಗೆ ಇರಬಾರದು ಎಂದು ಇದೆ.

ಶ್ರೀ ಕೆ. ಕೆಂಚಪ್ಪ.—ಈಗ ಹೊಸ ಕಾನೂನು ಮಾಡುತ್ತೇವೆಂದು ಹೇಳಿ ಹಿಂದಿನ ಸರ್ಕಾರ ಅಂಗೀಕರಿಸಿದ್ದ ತತ್ವವನ್ನು ಅನುಸರಿಸಿ ಈ ಡ್ರಾಫ್ಟಿನಲ್ಲಿ ಸಲಹೆ ಮಾಡಿದ್ದೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲಿ ಅಗತ್ಯವಿಲ್ಲದ ಅನೇಕ ಟೀಕೆಗಳೆಲ್ಲಾ ಇವೆ. ನಾನು ಎಲ್ಲಾ ಸದಸ್ಯರೂ ಮಾಡಿದ ಟೀಕೆಗಳಿಗೆ ಉತ್ತರ ಕೊಡುವುದಿಲ್ಲ. ಯಾವಯಾವ ವಿಷಯಗಳನ್ನು ಕುರಿತು ಮಾನ್ಯ ಸದಸ್ಯರು ಹೇಳಿದ್ದಾರೋ ಅವುಗಳ ಪೈಕಿ ಕೆಲವು ಅಂಶಗಳಿಗೆ ಸಾಮಾನ್ಯವಾಗಿ ಒಂದು ತತ್ವದ ಪ್ರಕಾರ ಹೇಳಿದ್ದೇನೆ. ಕಾಂಟ್ರಿಬ್ಯೂಷನ್ ಮೇಲೆ ಬಡ್ಡಿಹಾಕುತ್ತಾರೆಎಂದು ಹೇಳಿದರು. ಬಡ್ಡಿ ಹಾಕುವುದಿಲ್ಲ. ಉದಾಹರಣೆಗೆ 200 ರೂಪಾಯಿ ಕಾಂಟ್ರಿಬ್ಯೂಷನ್ ಅನ್ನು ವರ್ಷಕ್ಕೆ ಹತ್ತು ರೂಪಾಯಿಗಳಂತೆ 20 ಕಂತುಗಳಲ್ಲಿ ಕೊಡಬೇಕೆಂದು ಗೊತ್ತುಮಾಡಿದರೆ ಆಗ ಮೊದಲನೆ ವರ್ಷ ಹತ್ತುರೂಪಾಯಿ ಕೊಡದಿದ್ದರೆ ಎರಡನೆಯ ವರ್ಷ 20 ರೂಪಾಯಿಗಳನ್ನು ಕೊಡಬೇಕು. ಆಗ ಹತ್ತು ರೂಪಾಯಿಗಳಿಗೆ ಬಡ್ಡಿ ಸೇರಿಸಿ ನಿಂತ ಬಾಕಿ ಯೆಲ್ಲಾ ಕೊಡಬೇಕು. ಯಾವಯಾವ ಕಂತುಗಳು ಬಾಕಿ ನಿಲ್ಲುತ್ತವೋ ಆ ಕಂತುಗಳ ಮೇಲೆ ಬಡ್ಡಿ ಕೊಡಬೇಕು.

ಶ್ರೀ ಎಂ. ಸಿ. ನರಸಿಂಹನ್.—ಹೈದರಾಬಾದಿನಲ್ಲಿ ಬೇರೆ ರೀತಿ ಇದೆ.

ಶ್ರೀ ಯು. ಎಂ. ಮಾದಪ್ಪ.—ಕಾಂಟ್ರಿಬ್ಯೂಷನ್ ಫಿಕ್ಸ್‌ಮಾಡುವಾಗ ಇಂಟರೆಸ್ಟ್ ಸೇರಿಸಿ ವಸೂಲು ಮಾಡಿಬಿಡಿ. ಆ ರೀತಿ ಒಂದು ವರ್ಷ ಕೊಟ್ಟ ಮೇಲೆ ಅರಿಯರ್ಸ್ ಮೇಲೆ ಬಡ್ಡಿ ಬೀಳುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲಾ ಅಂಶಗಳಿಗೂ ಉತ್ತರಗಳನ್ನು ಹೇಳಿದ್ದೇನೆಂದು ಕಾಣುತ್ತದೆ.

ಇತರ ಮಾನ್ಯ ಸದಸ್ಯರುಗಳು ಬಹಳ ಆತುರರಾಗಿದ್ದಾರೆ. ಇನ್ನೂ ಬಾಕಿ ಉಳಿದಿರುವ ಸಲಹೆಗಳನ್ನು ಸೆಲೆಕ್ಟ್ ಕಮಿಟಿಯವರು ಚರ್ಚೆಮಾಡಿ ಸೂಕ್ತ ರೀತಿಯಲ್ಲಿ ಕಾನೂನನ್ನು ಬದಲಾವಣೆಮಾಡಿ ಸಭೆಯ ಮುಂದೆ ತರುತ್ತೇವೆ. ಒಟ್ಟಿನಲ್ಲಿ ವಿರೋಧಪಕ್ಷದವರೇ ಆಗಲಿ ಅಥವಾ ಇನ್ನೂ ಯಾವ ಪಕ್ಷದವರೇ ಆಗಲಿ ಈ ಮಸೂದೆಯ ತತ್ವವನ್ನು ಒಪ್ಪಿಕೊಂಡಿದ್ದಾರೆ. ಯಾವರೀತಿ ಬದಲಾವಣೆ ಮಾಡಿದರೆ ಹೆಚ್ಚು ಅನುಕೂಲ ಎಂದು ಸಲಹೆ ಕೊಟ್ಟಿದ್ದೀರಿ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೆ ಸದಸ್ಯರು ಅನುಮತಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಮಾತು ಹೇಳಬೇಕಾಗಿದೆ 1947ನೆಯ ಇಸ್ವಿಯಲ್ಲಿ ಈ ತೆರಿಗೆ ಹಾಕಿದ್ದಾರೆ. 1950ನೆಯ ಇಸ್ವಿಯಿಂದ ಈ ತೆರಿಗೆ ಇಲ್ಲ. 1944ನೆಯ ಇಸ್ವಿಯಿಂದ ಕೆಲವು ಕಾರಣಗಳಿಂದ ದೊಡ್ಡದೊಡ್ಡ ನೀರಾವರಿಗೆ 30 ಕೋಟಿ 50 ಕೋಟಿ ಹೀಗೆ ಖರ್ಚಾಗುತ್ತಿದೆ. ಹತ್ತು ವರ್ಷಗಳಿಂದ ಕಷ್ಟಪಡುತ್ತಿದ್ದರೂ ಅರ್ಧಂಬರ್ಧ ಕೆಲಸವಾಗಿದೆ. ಇಂಥ ಸಂದರ್ಭದಲ್ಲಿ ನೀರು ಕೊಟ್ಟು ವ್ಯವಸಾಯ ಮಾಡಿದ ಮೇಲೆ ಕಾಂಟ್ರಿಬ್ಯೂಷನನ್ನು 20 ಕಂತುಗಳಲ್ಲಿ ವಸೂಲುಮಾಡಲು ಅವಕಾಶಮಾಡಿಕೊಟ್ಟಿದೆ.

ಉದ್ದೇಶ ಅದಲ್ಲ, ಬೇರೆ ಬೇರೆ ಪ್ರಾಂತ್ಯದಲ್ಲೂ ಸಹ ಈ ರೀತಿ ವಿಧಿಸುವ ಉದ್ದೇಶ ಏನಿರಬೇಕೆಂಬುದು ತೀರ್ಮಾನವಾಗಿ ಕಾಂಟ್ರಿಬ್ಯೂಷನ್ ವಗೈರೆ ಹಾಕಿರುತ್ತಾರೆ. ಹಿಂದೆ ಮುಚ್ಚಳಿಕೆ ಬರೆಸಿಕೊಂಡು ಕಾಂಟ್ರಿಬ್ಯೂಷನ್ ಇಷ್ಟು ಎಂದು ಹಾಕಿ ಮಾಡಿರತಕ್ಕ ಕೆಲಸಗಳಿಗೂ ಬದಲಾವಣೆ ಮಾಡಲಿಕ್ಕೆ ಅವಕಾಶವಿದೆ. ಸರ್ಕಾರಕ್ಕೆ ರೈತರಿಗೂ ಒಪ್ಪಂದವಾಗದೆ ಇರತಕ್ಕ ಹೊಸ ಕೆಲಸಗಳಿಗೆ . . .

ಶ್ರೀ ಯು. ಎಂ. ಮಾದಪ್ಪ.—3ನೆಯ ಸೆಕ್ಷನ್‌ನಲ್ಲಿ 'whether after the commencement of this Act or at any time before such commencement' ಎಂದು ಹೇಳುತ್ತೀರಿ. "Before such commencement" ಎಂದರೆ ಎಷ್ಟಾಗುತ್ತದೆ ಸ್ವಾಮಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ಕೆಲಸಗಳನ್ನು ಪ್ರಾರಂಭಮಾಡಿದ್ದೇವೆ. 1944ರಲ್ಲಿ ಪ್ರಾರಂಭ ಮಾಡಿ ಮುಗಿಯದೇ ಇರುವ ತುಂಗಭದ್ರಾ, ಭದ್ರಾ ಪ್ರಾಜೆಕ್ಟುಗಳೆಲ್ಲಾ ಇವೆ. ಅಲ್ಲಿಗೂ ಸಹ ಇದು ಅನ್ವಯಿಸುತ್ತದೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—1944ನೆಯ ಇಸವಿಯಲ್ಲಿ ಷುರುಮಾಡಿದ ಕೆಲಸಗಳಿಗೆ ಹಿಂದೆ ಯಾವುದಾದರೂ ಒಂದು ಒಪ್ಪಂದಕ್ಕೆ ಬಂದಿದ್ದರೆ ಅದನ್ನು ಬದಲಾವಣೆಮಾಡುವ ಪ್ರಸ್ತಾಪ ಬಂತು. ಈ ವಿಚಾರದಲ್ಲಿ ಹಿಂದೆ ಡಾ॥ ನಾಗನಗೌಡರ ಸಮಿತಿಯವರು ಮಾಡಿರತಕ್ಕ ಶಿಫಾರಸಿನಲ್ಲಿ ಇಂಥ ಕೆಲಸಕಾರ್ಯಗಳಿಗೂ ಕೂಡ ಕ್ಯಾಪಿಟಲ್ ಲೆವೀ ಹೆಚ್ಚಾಗಿದ್ದರೆ ರಿವೈಸ್ ಮಾಡುವ ಅಧಿಕಾರ ಸರ್ಕಾರಕ್ಕಿರಬೇಕೆಂದು ಶಿಫಾರಸು ಮಾಡಿರಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ವರದಿ ನಮ್ಮ ಮುಂದೆ ಇಲ್ಲ. ಆದ್ದರಿಂದ ಆ ವಿವರ ಗೊತ್ತಿಲ್ಲ. ಈ ಎಲ್ಲಾ ಅಂಶಗಳನ್ನೂ ಸೆಲೆಕ್ಟ್ ಸಮಿತಿಯಲ್ಲಿ ಪರಿಶೀಲನೆ ಮಾಡಿ, ತೀರ್ಮಾನ ಮಾಡಬಹುದು.

Sri M. C. NARASIMHAN.—So far as the increment in the capital value of the land is concerned, are we to take it as prevalent on the date of enquiry of the case or earlier period ?

Sri H. K. VEERANNA GOWDH.—When the work is complete, when the land is going to be benefited, what will be the enhanced value of the land—that is the point.

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ಸರ್ಕಾರದವರು ಅಣೆಕಟ್ಟು ಕಟ್ಟಿ ನೀರು ಒದಗಿಸುವ ಸೌಲಭ್ಯ ಮಾಡಿಕೊಟ್ಟರೆ ಹೇಗೆ ಕರ ತೆಗೆದುಕೊಳ್ಳುತ್ತೀರೋ ಹಾಗೆಯೇ ಖಾಸಗಿಯಾಗಿ ಯಾವುದಾದರೂ ಹಳ್ಳಕ್ಕೆ ಪಂಪು ಹಾಕಿಸಿಕೊಂಡು ನೀರು ಒದಗಿಸಿಕೊಂಡರೆ ಅದಕ್ಕೂ ಕರ ಕೊಡಬೇಕೆಂತಲೇ ?

ಶ್ರೀ ಎಚ್. ಕೆ ವೀರಣ್ಣಗೌಡ —ಹೌದು, ಹಳ್ಳದ ನೀರೂ ಸಹ ಸರ್ಕಾರದವರ ನೀರೇ. ತಮಗೆ ಬೇಕಾದರೆ ಒಂದು ಉದಾಹರಣೆ ಹೇಳುತ್ತೇನೆ. ವಿಶ್ವೇಶ್ವರಯ್ಯ ನಾಲಾಕೆಳಗೆ ನನ್ನ ಜಮೀನು ಇದೆ. ಸರ್ಕಾರದವರು ಕಡ್ಡಾಯವಾಗಿ ನೀರು ಒದಗಿಸಬೇಕೆಂದು ಇದೆ. ಕಾಂಟ್ರಿಬ್ಯೂಷನ್ ತೆಗೆದುಕೊಳ್ಳುತ್ತಾರೆ. ಆದರೆ ನನ್ನ ಜಮೀನು tail end ನಲ್ಲಿ ಇರುವುದರಿಂದ ನೀರು ಒದಗುವುದು ಕಷ್ಟ. ವಿಶ್ವೇಶ್ವರಯ್ಯ ನಾಲೆಯಲ್ಲಿ ನೀರಿನ ತೊಂದರೆ ಆದಾಗ, ಬೆಳೆ ಒಣಗತಕ್ಕ ಸಂದರ್ಭದಲ್ಲಿ ಸಹಾಯವಾಗಲಿ ಎಂದು ಆ ಜಮೀನಿನ ಕೆಳಗೆ ನೀರಿನ ಆಶ್ರಯ ಇದೆ, ಅಲ್ಲಿಂದ ಪಂಪುಹಾಕಿಸಿ ನೀರು ಒದಗಿಸಿಕೊಳ್ಳುತ್ತೇನೆ. ನನ್ನ ಹಣ ಖರ್ಚುಮಾಡಿ ಪಂಪು ಹಾಕಿಸಿಕೊಂಡು, ವಿದ್ಯುಚ್ಛಕ್ತಿ ಚಾರ್ಜಸ್ ಕೊಟ್ಟರೂಕೂಡ ಅದು ಸರ್ಕಾರದ ನೀರು ಎಂದು ಹೇಳಿ ಎಕರೆಗೆ ಐದು ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ, ಒಪ್ಪಿಕೊಂಡಿದ್ದೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಏತದಿಂದ ತೆಗೆಯುವ ನೀರೂ ಸೇರುತ್ತದೆಯೇ ?

ಅಧ್ಯಕ್ಷರು.—ಅದೆಲ್ಲಾ ಸರ್ಕಾರದ ನೀರು ಎಂದು ಹೇಳಿದರಲ್ಲಾ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಮಾನ್ಯ ಮಂತ್ರಿಗಳು ತಮ್ಮ ಜಮೀನು tail end ನಲ್ಲಿದೆ, ನೀರು ಬರದೇ ಇರುವುದರಿಂದ ಪಂಪು ಹಾಕಿಕೊಂಡಿದ್ದೇನೆ, ಆ ಮೂಲಕ ನೀರು ಒದಗಿಸಿಕೊಳ್ಳುತ್ತೇನೆ, ಅದಕ್ಕೂ ವಾಟರ್‌ರೇಟ್ ಕೊಡುತ್ತಾ ಇದ್ದೇನೆ ಎನ್ನುವ ಅರ್ಥದಲ್ಲಿ ಹೇಳಿದರು, ಒಪ್ಪಿಕೊಳ್ಳೋಣ. ಅದೇರೀತಿ tail end ಜಮೀನಿನಲ್ಲಿ ಹಾಕಿದ್ದ ಪೈರು ಒಣಗಿಹೋದಾಗಲೂ ಕೂಡ ಸರ್ಕಾರದವರು ವಾಟರ್ ರೇಟ್ ತೆಗೆದುಕೊಂಡಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೆ ಸರ್ಕಾರದವರು ರೆಮಿಷನ್ ಸಹ ಕೊಟ್ಟಿದ್ದಾರೆ.

Mr. SPEAKER.—The question is:

"That the Mysore Irrigation (Levy of Betterment Contribution and Water Rate) Bill, 1957, be taken into consideration."

The motion was adopted.

Sri H. K. VEERANNA GOWDH.—Sir, I beg to move :

"That the Mysore Irrigation (Levy of Betterment Contribution

(SRI H. K. VEERANNA GOWDH) and Water Rate) Bill, 1957, be referred to a Select Committee consisting of the following Members: Sriyuts B. Vaikunta Baliga, K. L. Narasimhaiya, H. V. Veere Gowda, A. Muniyappa, N. K. Bomme Gowda, Kundur Rudrappa, K. Venkataramana Gowd, A. J. Doddameti, A. R. Panchagavi, Shrimati Basavarajeswari, Sriyuts S. Sharan Gowda, B.V. Desai, B. E. Ramaiah, R. M. Desai, M. Danappa, H. K. Siddiah, M. Rajasekhara Murthy, M. Linge Gowda, D. H.Rudrappa, and the Mover."

Mr. SPEAKER.—Motion moved:

"That the Mysore Irrigation (Levy of Betterment Contribution and Water Rate) Bill, 1957, be referred to a Select Committee consisting of the following Members: Sriyuts B. Vaikunta Baliga, K. L. Narsimhaiya, H. V. Veere-Gowda, A. Muniyappa, N. K. Bomme Gowda, Kundur Rudrappa, K. Venkataramana Gowd, A. J. Doddameti, A. R. Panchagavi, Shrimati Basavarajeswari, Sriyuts S. Sharan Gowd, B. V. Desai, B. E. Ramaiah, R. M. Desai, M. Danappa, H. K. Siddiah, M. Rajasekhara Murthy, M. Linge Gowda, D. H. Rudrappa, and the Mover."

Sri A. V. NARASIMHA REDDY (Bangalore South).—Sir I beg to move:

"That the following members be included in the Select Committee:

Shriyuts: B. R. Sunthankar, V. L. Patil, H. V. Koujalgi, K. Puttaswamy, H. M. Channabasappa, Srimathi Leelavathi Magadi."

Sri B. K. PUTTARAMIYA.—Sir, I beg to move:

"That the following names be included in the list of Members of the Select Committee:—

Sri U. M. Madappa
,, V. Srinivasa Shetty
,, K. P. Revannasiddappa
,, C. J. Muckannappa."

Sri G. VENKATAI GOWDA (Palaiyam).—Sir, I beg to move:

"That the following Members be included in the list of members of the Select Committee:—

1. Sri A. G. Chunche Gowda
2. Srimathi Nagarathnamma."

Mr. SPEAKER.—I will now put the amendments to the vote.

The question is:

"That the following Members be included in the list of Members of the Select Committee:—

1. Sri A. G. Chunche Gowda
2. Srimathi Nagarathnamma."

The motion was negatived.

Mr. SPEAKER.—The question is:

"That the following Members be included in the list of Members of the Select Committee:—

Sri U. M. Madappa
,, V. Srinivasa Shetty
,, K. P. Revannasiddappa
,, C. J. Muckannappa."

The motion was negatived.

Mr. SPEAKER.—The question is:

"That the following Members be included in the list of Members of the Select Committee:—

Sri B. R. Sunthankar
,, V. L. Patil
,, H. V. Koujalgi
,, K. Puttaswamy
,, H. M. Channabasappa
Srimathi Leelavathi Magadi."

The motion was adopted.

Mr. SPEAKER.—The question is:

"That the Mysore Irrigation (Levy of Betterment Contribution and Water Rate) Bill, 1957, be referred to a Select Committee consisting of the following Members:—

1. Sri H. K. Veeranna Gowdh
2. ,, B. Vaikunta Baliga
3. ,, K. L. Narasimhiah
4. ,, H. V. Veere Gowda
5. ,, A. Muniyappa

6. Sri M. K. Bomme Gowda
7. ,, Kundur Rudrappa
8. ,. K. Venkataramana Gowd
9. ,, A. J. Doddameti
10. ,, A. R. Panchagavi
11. Srimathi Basavarajeswari
12. Sri S. Sharan Gowd
13. ,, B. V. Desai
14. ,, B. E. Ramaiah
15. ,, R. M. Desai
16. ,, M. Danappa
17. ,, H. K. Siddiah
18. ,, M. Rajasekhara Murthy
19. ,, M. Linge Gowda
20. ., D. H. Rudrappa
21. ,, B. R. Sunthankar
22. ,, V. L. Patil
23. ,, H. V. Koujalgi
24. ,, K. Puttaswamy
25. ., H. M. Channabasappa
26. Srimathi Leelavathi Magadi.'

The motion was adopted.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ನಾವು ಈಗ ಮತ್ತು ಹಿಂದೆಯೂ ಕೂಡ, "ನಿಮ್ಮ ಪಾರ್ಟಿಯಿಂದ ನೀವು ಕೊಟ್ಟ ಹೆಸರುಗಳನ್ನು ಸೆಲೆಕ್ಟ್ ಕಮಿಟಿಗೆ ಹಾಕಿಕೊಳ್ಳುತ್ತೇವೆ" ಎಂದು ಮಂತ್ರಿಗಳು ಭರವಸೆಯನ್ನು ಕೊಟ್ಟಮೇಲೆ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೆ ಒಪ್ಪಿಕೊಂಡೆವು. ಆದರೆ ಈಗ ನಮ್ಮ ಪಾರ್ಟಿಯಿಂದ ಒಂದೆರಡು ಹೆಸರುಗಳನ್ನು ಹಾಕಿ, ದೇಶದ ಅಭಿಪ್ರಾಯವನ್ನು ಸೂಚಿಸಲು ಎಲ್ಲ ಪಕ್ಷಗಳಿಂದಲೂ ಸದಸ್ಯರನ್ನು ಸೇರಿಸಿಕೊಂಡಿದ್ದೇವೆಂಬ ಭಾವನೆಯನ್ನುಂಟುಮಾಡಿ, ತಾವು ಮಾಡತಕ್ಕ ಕಾನೂನುಗಳ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸುವುದಕ್ಕೆ ಅವಕಾಶವಿರುವುದರಿಂದ ನಮ್ಮ ಪಾರ್ಟಿಯವರು ಇದರಲ್ಲಿ ಭಾಗವಹಿಸುವುದಕ್ಕೆ ಸಿದ್ಧರಾಗಿಲ್ಲ. ನಮ್ಮ ಪಾರ್ಟಿಯವರು ಯಾರೂ ಕಮಿಟಿಗೆ ಬರುವುದಿಲ್ಲವೆಂಬುದನ್ನು ತಾವು ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ನೀವು ಏಕೆ ಹೇಳುತ್ತೀರಿ ? ನೀವು ವಿರೋಧಪಕ್ಷದ ನಾಯಕರೇ ?

Sri B. K. PUTTARAMIYA.—I am the whip of the party.

Mr. SPEAKER.—The Leader of the Opposition and the Leader of the House are mostly concerned in such matters. So, if the Leader of the Opposition wants to make a statement that is welcome.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಸ್ವಾಮಿ, ಇದುವರೆಗೂ ನಾವು ಬಹಳವಾಗಿ ನೋಡಿದೆವು. ಆದರೂ ಸಹಿತ ನಮ್ಮ ಕಡೆಯ ಅಹವಾಲನ್ನು ಯಾರೂ ಗಮನಿಸಿದ ಹಾಗೆ ಕಾಣುವುದಿಲ್ಲ. ಆದುದರಿಂದ ಇನ್ನುಮೇಲೆ, ಈಗ ಮಾಡಿರುವ ಕಮಿಟಿಯನ್ನು ಸಹ ಸೇರಿಸಿಕೊಂಡು, ನಮ್ಮನ್ನು ಕೇಳದೆ ವಿಚಾರಮಾಡದೆ, ಸದಸ್ಯರನ್ನು ಸೇರಿಸಿಕೊಂಡು ವಿರೋಧಪಕ್ಷದವರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆನ್ನತಕ್ಕ ಭಾವನೆಯನ್ನು ಬಿಡಬೇಕು. ಈ ಸೆಲೆಕ್ಟ್ ಕಮಿಟಿಯಲ್ಲಿ ನಮ್ಮ ಪಾರ್ಟಿಯವರು ಯಾರೂ ಸೇರುವುದಿಲ್ಲವೆಂದು ಈ ಮೂಲಕ ಹೇಳುತ್ತೇನೆ.

Business of the House

Mr. SPEAKER.—Before we rise, I have to make an announcement in respect of certain matters.

The following is the statistical statement of questions, resolutions, half-hour discussions, motions, etc., as on 12th August 1957:—

QUESTIONS

Number of questions tabled ...	1,800
Number of admitted questions sent to Government.	1,397
Number of replies received ...	535
Number of questions taken up for answers.	426
Number of replies on hand ...	109

RESOLUTIONS

Number of Resolutions tabled.	70
Number of Resolutions admitted.	64
Number of Resolutions taken for discussion but not completed.	1

SPECIAL RESOLUTIONS

Number of special Resolutions tabled.	1
Number of special Resolutions admitted.	Nil

HALF-AN-HOUR DISCUSSIONS.

Number given notice of ...	6
Number discussed ...	2

ADJOURNMENT MOTIONS.

Number given notice of ...	6
Number disallowed ...	6

MOTIONS.

Number received ...	6
Number disallowed ...	6

As the Hon'ble Members know, we will have to take up certain Bills also. I want to take the sense of the House in this respect so far as the Mysore University (Amendment) Bill, 1957, and the Karnatak University (Amendment) Bill, 1957, are concerned. What should we do about it ?